ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೨
ವಿಚಾರ ಸಾಹಿತ್ಯಮಾಲೆ – ೭೫
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಮನು: ಸಾಮಾಜಿಕ ಚಿಂತನೆಗಳ ಮೂಲ ಪುರುಷ

ಮನು: ಸಾಮಾಜಿಕ ಚಿಂತನೆಗಳ ಮೂಲ ಪುರುಷ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧

ಮೂಲ
ಕೇವಲ್ ಮೋಟ್ವಾನಿ

ಅನುವಾದ
ಬಿ. ಎಸ್. ರುಕ್ಕಮ್ಮ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Saamajika Chintanegala Moola Purusha: Kannada translation of *Manu - The Origins of Social Thought* : **Kewal Motwani;** Kannada translation by **B. S. Rukkamma;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxiv + 26. Price : Rs. 10/-

ಮುದ್ರಣ : ೨೦೧೩
ಪುಟಗಳು : xxiv + ೨೬
ಬೆಲೆ : ರೂ. ೧೦/-

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

ಸಿದ್ದರಾಮಯ್ಯ
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

'**ಕನಕದಾಸರ ಕೃತಿ**'ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಕರ್ನಾಟಕ ಸರ್ಕಾರ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧


ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.



(ಬಸವರಾಜು)

ಕರ್ನಾಟಕ ಸರ್ಕಾರ

ಕೆ.ಆರ್. ರಾಮಕೃಷ್ಣ, ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.



(ಕೆ. ಆರ್. ರಾಮಕೃಷ್ಣ)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು

ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಕೇವಲ್ ಮೋಟ್ವಾನಿ ಅವರ *Manu - The Origins of Social Thought* ಪುಸ್ತಕದ ಕನ್ನಡ ಅನುವಾದ. 'ಮನು: ಸಾಮಾಜಿಕ ಚಿಂತನೆಗಳ ಮೂಲ ಪುರುಷ' ಎಂಬ ಹೆಸರಿನಲ್ಲಿ ಶ್ರೀಮತಿ ಬಿ. ಎಸ್. ರುಕ್ಕಮ್ಮ ಅವರು ಇದನ್ನು ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

ಕೆ. ಎಂ. ಮುನ್ಷಿ

ಪ್ರಸ್ತಾವನೆ

ಇದೇ ಲೇಖಕರನ್ನು ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನವರು ೧೯೪೦ರ ಸುಮಾರಿನಲ್ಲಿ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ವಿಜ್ಞಾನ ಮತ್ತು ಸಮಾಜವನ್ನು ಕುರಿತು ಉಪನ್ಯಾಸಗಳನ್ನು ನೀಡಲು ಆಹ್ವಾನಿಸಿದರು. ಆಗಿನ ಕಾಲಕ್ಕೆ ಅತ್ಯಾಧುನಿಕವೆನಿಸಿದ ವೈಜ್ಞಾನಿಕ ಮತ್ತು ಸಮಾಜ ಜೀವನಕ್ಕೆ ಸಹಕಾರಿಯಾದ ಉಪಕರಣಗಳ ಸಂಗತಿಗಳನ್ನು ಒಗ್ಗೂಡಿಸಿ ನೋಡಿದಾಗ ಕಂಡುದಿಷ್ಟು. ಹಿಂದೆ ನೂಲು ತೆಗೆಯುವ ರಾಟೆ(ಸ್ಪಿನ್ನಿಂಗ್ ಜೆನ್ನಿ)ಯನ್ನು ಹರ್‌ಗ್ರೀವ್ಸ್‌ನು ಕಂಡುಹಿಡಿದಾಗ, ಆರ್ಕ್‌ರೈಟನು ಜಲಿಯಂತ್ರನನ್ನು ಅನ್ವೇಷಣೆ ಮಾಡಿದಾಗ ನಮಗೊದಗಿದ ಆಶ್ಚರ್ಯವೇ ಇಂದಿಗೂ ಆಧುನಿಕ ಸಂಶೋಧನೆಗಳನ್ನು ಕಂಡಾಗ ಆಗುವುದರಲ್ಲಿ ಆಶ್ಚರ್ಯವಿಲ್ಲ. ಅಂದು ಲೇಖಕರು ಬರೆದ ಎಷ್ಟೋ ಸಂಗತಿಗಳಿಂದ ಇಂದಿಗೆ ಪ್ರಪಂಚ ಮುಂದೆ ಬಂದಿದೆ. ವೈಜ್ಞಾನಿಕ ಸಂಶೋಧನೆಗಳಲ್ಲಿ ಮತ್ತು ಸಾಮಾಜಿಕ ಉಪಕರಣಗಳನ್ನು ಅನ್ವೇಷಿಸುವಲ್ಲಿ ಈ ಹಿಂದಿನ ಮೂವತ್ತು ವರ್ಷಗಳು ಅತ್ಯುತ್ತಮವಾದ ಸಾಧನೆಗಳಿಗೆ ಅವಕಾಶವಿತ್ತಿದೆ.

ಪರಮಾಣು ಶಕ್ತಿಯನ್ನು ಬಿಡುಗಡೆ ಮಾಡಿದ್ದಾಯಿತು. ಚಂದ್ರನ ಕಡೆಗೆ ಮಾನವ ಸಹಿತ ಮತ್ತು ರಹಿತವಾಗಿ ಪ್ರಯಾಣ ಕೈಗೊಂಡುದಾಯಿತು. ಕೋಶಗಳನ್ನು ಸಂಗ್ರಹಿಸಿದುದಾಯಿತು. ಶತಮಾನಗಳಗಟ್ಟಲೆ ಗುಣಿಸಬಹುದಾದ ಲೆಕ್ಕಾಚಾರಗಳನ್ನು ಗಣಕ ಯಂತ್ರಗಳು ಜಟಪಟನೆ ಪೂರೈಸಿದವು. ಖಂಡಾಂತರಗಳ ನಡುವೆ ಸಂಪರ್ಕವು ಅಗಣಿತವಾಗಿ ಬೆಳೆಯಿತು. ಮಾನವರ ಅಂಗಾಂಗಗಳ ಕಸಿ, ಅದರಲ್ಲಿಯೂ ಮಸ್ತಿಷ್ಕದ ಕಸಿ ಸಾಧ್ಯವಾಗಿದೆ. ಇತರ ಶಸ್ತ್ರಕ್ರಿಯೆಗಳನ್ನು ಕುರಿತು ಹೇಳುವುದೇನು. ಗೋವನ್ನೇ ಅರಿಯಗೊಡದ ಬುದ್ಧಿ ಬದಲಾವಣೆ ಹಾಗಿರಲಿ, ಒಂದೊಂದು ಇಡಿಯ ಜನಾಂಗದ ಮನಸ್ಸು ಬದ್ಧಿಗಳನ್ನೇ ಪರಿಮಾರ್ಜನೆಗೀಡುಮಾಡಬಲ್ಲರು. ಮನುಷ್ಯರ ದೈಹಿಕ ಶ್ರಮವನ್ನು ಯಂತ್ರಮಾನವರು ಹಗುರ ಮಾಡಿದ್ದಾರೆ. ಇನ್ನು ಮುಂದೆ ಆಲೋಚಿಸಿ, ಚರ್ಚಿಸಬಲ್ಲ ಯಂತ್ರಗಳನ್ನು ರೂಪಿಸುವುದೂ ಆದೀತು. ಹುಟ್ಟಲಿರುವ ಕೂಸಿನ ಲಿಂಗವೂ ನಮ್ಮ ನಿಯಂತ್ರಣದಲ್ಲಿದೆ. ಒಂದು ರೈಲು ಬಂಡಿಯನ್ನು ತುಂಬುವಷ್ಟು ಜನರನ್ನು ಹೊತ್ತು ವಿಮಾನಗಳು ಅಂತರಿಕ್ಷದಲ್ಲಿ ಗಂಟೆಗೆ ಸಾವಿರ ಮೈಲಿಯ ವೇಗದಲ್ಲಿ ಧಾವಿಸಬಲ್ಲವು. ಅರ್ಧ ಗಂಟೆಯಲ್ಲಿ ಪಟ್ಟಣಗಳನ್ನು ಸುಟ್ಟು, ಲಕ್ಷಾಂತರ ಜನರನ್ನು ಪುಡಿಗುಟ್ಟುವ ಆಯುಧಗಳು ನಮ್ಮಲ್ಲಿ ಬೇಕಾದಂತೆ ಇವೆ. ಅಣುಶಕ್ತಿಯಿಂದ ಚಲಿಸುವ ಜಲಾಂತರ್ಗಾಮಿಗಳು ತಮ್ಮ ಪರಮಾಣು ಬಾಂಬುಗಳನ್ನು ಹತ್ತು ದಿಕ್ಕುಗಳಿಗೆ ಹೂಡಿ ಏಕಕಾಲದಲ್ಲಿ ಘಾಸಿ ಮಾಡಬಲ್ಲವು. ಪರ್ವತಗಳನ್ನು ಅಂದಗೆಡಿಸದೆ ಅವುಗಳ ಬುಡದಲ್ಲಿರುವ ಕಲ್ಲಿದ್ದಲು, ಎಣ್ಣೆಗಳನ್ನು ಸಂಗ್ರಹಿಸಿ ಕೊಳವೆಗಳ ಮೂಲಕ ಈಗ ಜನ ಹಾಯಿಸಬಲ್ಲರು. ಬೆಟ್ಟ ಗುಡ್ಡಗಳು ಅರೆ ನಿಮಿಷದಲ್ಲಿ ಪರಮಾಣು ಶಕ್ತಿಯಿಂದ ಬೂದಿಯ ರಾಶಿಯಾಗಬಲ್ಲವು. ಊರಿನ ಮನೆಗಳಿಗೆಲ್ಲ, ಅಷ್ಟೇ ಏಕೆ ವಿಶ್ವಾದ್ಯಂತ

ಎಲ್ಲ ಮನೆಗಳಿಗೂ ವಾತಾವರಣ ನಿಯಂತ್ರಣ ಮಾಡುವ ದಿನಗಳೂ ದೂರವಿಲ್ಲ. ಕಳೆದ ಮೂವತ್ತು ವರ್ಷಗಳಲ್ಲಿ ಬೆಳೆದಿರುವ ವೈಜ್ಞಾನಿಕ ಸಂಶೋಧನೆಗಳನ್ನು ಬಣ್ಣಿಸಲು ಗ್ರಂಥಗಳ ಸಂಘಟನೆ ಬೇಕು.

ಸಾಮಾಜಿಕ ಜೀವನದ ಉಪಕರಣಗಳ ವಿಷಯವು ಹೀಗೆಯೇ ಪರಮಾಣುಶಕ್ತಿ ಲಕ್ಷಾಂತರ ಜನರನ್ನುಳ್ಳ ಪಟ್ಟಣಗಳನ್ನು ಕೆಲವು ನಿಮಿಷಗಳಲ್ಲಿ ಪುಡಿಗಟ್ಟಲು ಶಕ್ತವಾಗಿದ್ದೀತು. ವಿಷಾನಿಲಗಳ ಕೊಠಡಿಗೆ ಸಾವಿರಾರು ಜನ ಹೆಂಗಸರು, ಗಂಡಸರು, ಮಕ್ಕಳೆನ್ನದೆ ನೂಕಿ ಭಸ್ಮ ಮಾಡುತ್ತಿದ್ದರಲ್ಲದೆ, ಗೆಸ್ಟವೊ ಮತ್ತು ಓಗ್ಪೂಗಳೆಂದು ಕರೆದುಕೊಳ್ಳುತ್ತ ಲಕ್ಷಾಂತರ ಜನರ ಶರೀರ, ಮನಸ್ಸುಗಳನ್ನು ತಲ್ಲಣಗೊಳಿಸಿ ನಾವು ಬದುಕಿನ ನಡುವೆ ಹೆಣಗುವಂತೆ ಮಾಡುತ್ತಿದ್ದರು. ಚಂದ್ರನನ್ನು ಭೀಕರ ಅಸ್ತ್ರಗಳಿಗೆ ನೆಲೆಯಾಗಿ ಮಾಡಿಕೊಂಡು, ವೈರಿ ದೇಶಗಳನ್ನು ದೂರದಿಂದಲೇ ಸುಟ್ಟು ಹಾಕುವ ದುರಾಲೋಚನೆಯು ಬೆಳೆದಿದೆ ಎನ್ನುತ್ತಾರೆ. ಮನುಷ್ಯರ ನಿರ್ದಯರಾಗಿ ವಾತಾವರಣವನ್ನು ಹಾಲುಗೈದು ಮುಗ್ಧ ಜೀವಿಗಳ ಬಾಳನ್ನು ಹಾಳುಗೈದು ತನ್ನ ಇರವಿನ ಬುಡಕ್ಕೇ ಕಲ್ಲು ಹಾಕಿಕೊಂಡಿದ್ದಾರೆಂದು ತಿಳಿಯುತ್ತಲಿದೆ.

ಯೂರೋಪ್ ಮತ್ತು ಅಮೆರಿಕದ ಕೆಲವು ಪಟ್ಟಣಗಳ ಮೇಲೆ ಕವಿದಿರುವ ಇಂಗಾಲದ ಮಾನಾಕ್ಸೈಡು ಎಷ್ಟೊಂದು ದಟ್ಟವಾಗಿ ಇದೆಯೆಂದರೆ ಭೂಮಿ ಅದನ್ನು ಜೀರ್ಣಿಸಿಕೊಳ್ಳಲಾರದು. ಹಾಗಿದ್ದರೂ ಜನಸಂಖ್ಯೆ ಮಿರಿಮೀರಿದೆ, ಪ್ರಪಂಚದಲ್ಲೆಲ್ಲಿಯೂ ಅವರ ಜೀವನ ದೀರ್ಘತರವಾಗಿದೆ. ಶಾರೀರಿಕ ಮಾನಸಿಕ ಶಕ್ತಿಗಳು ಹಾಳು ಬಿದ್ದಿವೆ. ನದಿಗಳು, ಸರೋವರಗಳು ಸಮುದ್ರಗಳು, ಕೈಗಾರಿಕಾ ತ್ಯಾಜ್ಯಗಳಿಂದ ಕಲುಷಿತವಾಗುತ್ತ ನಡೆದಿವೆ. ಅಲ್ಲಿನ ಸಮಸ್ತ ಚರಾಚರಗಳ ವಿನಾಶವಾಗುತ್ತ ನಡೆದಿದೆ. ಜನಾಂಗದ್ವೇಷವು ಅಂತರ್ದೇಶೀಯ ನೆಲೆಗಳಲ್ಲೂ ಬೆಳೆಯತೊಡಗಿವೆ. ಯುದ್ಧಗಳ ಪರಿಣಾಮವಾಗಿ ಈಗ ಹಿಪ್ಪೀಗಳು ಉದ್ಭವಿಸಿದ್ದರೆ. ಪಟ್ಟಣದ ವಿದ್ಯಾವಂತರಲ್ಲಿ ಅಸಮವಾದ ಮನಸ್ಥಿತಿ, ಯಾವಾಗಲೂ ಆಯಾಸ ಬೇಸರಗಳಿಂದ ದುಡಿಯುತ್ತಲೇ ಇರುವ ಮಧ್ಯಮ ವರ್ಗದವರು, ಯಂತ್ರಗಳ ಸಹವಾಸದಲ್ಲೇ ಇದ್ದು, ಹುಚ್ಚರಂತಾಗಿರುವ ಏಕತಾನತೆಯ ಜೀವನದ ಸೃಜನಶೀಲತೆಯಲ್ಲಿ ಮಗ್ನವಾಗದ ಬಿಡುವಿನ ಸಮಯಗಳು, ದಿನ ದಿನಕ್ಕೂ ಹೆಚ್ಚುತ್ತಿರುವ ಬೌದ್ಧಿಕ ವಿಕಲತೆ ಮತ್ತು ಅಸಮತೋಲನ ಎಲ್ಲೆಡೆಯೂ ಹೆಚ್ಚುತ್ತಲಿವೆ. ವಿಶ್ವವಿದ್ಯಾನಿಲಯಗಳು ಟೈಂಬಾಂಬುಗಳ ಭೀತಿಯಲ್ಲಿವೆ. ಪುಸ್ತಕ ಭಂಡಾರಗಳು, ಪ್ರಯೋಗಾಲಯಗಳು, ಆಡಳಿತ ಕಛೇರಿಗಳು ಬೆಂಕಿಗೆ ಆಹುತಿಯಾಗಿವೆ. ಮಾದಕ ವಸ್ತುಗಳ ಸೇವನೆ ಇಂದು ಪ್ರಪಂಚದಾದ್ಯಂತ ಸಮಸ್ಯೆಯಾಗಿದೆ. ಇಷ್ಟರಲ್ಲೇ ಅದೂ ಕಾನೂನಿಗೆ ಒಳಪಟ್ಟು ಔಷಧಿಯಂತೆ ಅಂಗಡಿಗಳಲ್ಲಿ ಬಿಕರಿಯಾಗಬಹುದು. ದೇಶಗಳ ನಡುವೆ ಅಂತರ್ಯುದ್ಧವು ತೊಡಗಿದೆ. ಯೂರೋಪದ ಚಕ್ರಾಧಿಪತ್ಯವು ನಿಧಾನವಾಗಿ ಕರಗುತ್ತಿದೆ. ಗುಲಾಮದೇಶಗಳು ಇತಿಹಾಸಪೂರ್ವದ ಪರಿಸ್ಥಿತಿಯಲ್ಲೇ ಉಳಿದಿವೆ. ಆದರೆ ಆದರ್ಶಗಳಲ್ಲಿ ಸ್ವತಂತ್ರ ಪಡೆದಂತೆ ಇವೆ. ಜನಾಂಗಗಳ ಸಂಖ್ಯೆ ಅಗಣಿತವಾಗುತ್ತಿವೆ. ಆದರೆ ವಿಶ್ವಸಂಸ್ಥೆ ಅವುಗಳ ಕಾನೂನಿಗೆ ತೂತು ಕೊರೆದು, ಅವುಗಳ ಪರಮಾಧಿಕಾರವನ್ನು ಮೊಟಕುಮಾಡುತ್ತಿವೆ. ಹಣವೂ ಡೋಲಾಯಮಾನವಾಗಿ ಅಂತರ್ದೇಶೀಯ ರಂಗದಲ್ಲಿ ಆಗಾಗ್ಗೆ ಏರುಪೇರನ್ನುಂಟುಮಾಡುತ್ತಿದೆ. ಯುದ್ಧವು ಕೆಲವು ಕಡೆಗಳಲ್ಲಿ ಮಾತ್ರ

ವ್ಯಾಧಿಯಂತೆ ನೆಲೆಸಿದೆ. ವಿಮಾನಗಳನ್ನು ಕದ್ದು ದಿಕ್ಕು ತಪ್ಪಿಸುವುದು, ಕಳ್ಳ ಸಾಗಾಣಿಕೆ ಮುಂತಾದವು. ವಿಶ್ವವ್ಯಾಪಕವಾಗಿದೆ. ಮಾನವ ಸಮಾಜವು ಎಲ್ಲೆಲ್ಲೂ ಲಂಚ ರುಷುವತ್ತುಗಳಲ್ಲಿ ಸಿಕ್ಕುಹಾಕಿಕೊಂಡು ಆಡಳಿತ ಯಂತ್ರದ ನಿರ್ದಯವಾದ ನಿಧನ ದ್ರೋಹಕ್ಕೆ ಸಿಲುಕಿ ಅಡ್ಡ ಕಸುಬಿಗಳ ಕೈಯಲ್ಲಿ ಮರುಗುತ್ತಿದೆ. ಕೆಲಸ ಕಡಿಮೆ, ವಿರಾಮ ಅಧಿಕವಾಗಿ, ಮೌಲ್ಯಗಳು ಮಾಯವಾಗಿ, ಪಾಶ್ಚಿಮಾತ್ಯರಂತೆ ಯಾಂತ್ರಿಕ ಬದುಕಿಗೆ ಒಳಪಟ್ಟು ಜನತೆ ಪೀಡಿತವಾಗಿದೆ. ಪಶ್ಚಿಮದ ಬೆಳಕು ಆರಿಹೋಗುತ್ತಿದೆ. ಪಶ್ಚಿಮದ ಪುರುಷರು ತಮ್ಮ ಗಂಡುತನವನ್ನು ತ್ಯಜಿಸಿ ಪ್ರಾಣತ್ಯಾಗ ಮಾಡಿಕೊಳ್ಳಲು ತೊಡಗಿದ್ದಾರೆ. ಏಕೆಂದರೆ ಉಳಿದ ಮಾನವ ಸಮಾಜವನ್ನೂ ಅವರು ತಮ್ಮೊಡನೆ ಸೆಳೆದೊಯ್ಯಲು ನಿರ್ಧರಿಸಿದ್ದರೆ.

ಭಾರತವು ಪ್ರಪಂಚದ ಒಂದು ಭಾಗ; ಅದು ಪಾಶ್ಚಿಮಾತ್ಯ ತಾಂತ್ರಿಕತೆ, ಮತ್ತು ಸಾಮಾಜಿಕ ಸಂಸ್ಥೆಗಳನ್ನು ಅನಾಮತ್ತಾಗಿ ನುಂಗಿ, ತಾನೂ ಅಂತಹ ರುಗ್ಣಶಯ್ಯೆಯಲ್ಲಿರುವ ಸಂಸ್ಕೃತಿಯಾಗಲು ಪ್ರಯತ್ನಿಸುತ್ತಿದೆ. ಲಂಚರುಷುವತ್ತುಗಳಿಂದ ಕೂಡಿ, ಸೃಜನಶೀಲತೆಯನ್ನು ಮರೆತು, ನಾಚಿಕೆ ಬಿಟ್ಟು, ಅನುಕರಣೆ ಮಾಡುತ್ತ, ಪಶ್ಚಿಮದ ಮಾಂಸಲ ಗಡಿಗೆಗಳಿಗೆ ತನ್ನ ಶರೀರ ಮತ್ತು ಆತ್ಮವನ್ನು ಒತ್ತೆಯಿಡುತ್ತಿದೆ. ಇದಕ್ಕೊಂದು ಶ್ರೇಷ್ಠ ಉದಾಹರಣೆ, ಭಾರತದ ಕಾನೂನು ವ್ಯವಸ್ಥೆ. ಪಾಶ್ಚಿಮಾತ್ಯರ ಅಣಕದ ನೋಟದ ಪಾಲಿಗೆ ಇದೊಂದು ಪಠ್ಯಪುಸ್ತಕದಂತೆ ಕಾಣುವುದು. ಇದೊಂದು ಜೀವನಾನುಭವ ದೂರವಾದ ವ್ಯವಸ್ಥೆ. ಇದರಲ್ಲಿ ದೇಶವನ್ನು ವಿಭಜಿಸುವ, ನಾಶ ಮಾಡುವ ತಪ್ಪುಗಳಿವೆ. ಪಶ್ಚಿಮದವರ ಪ್ರಜಾತಂತ್ರವೂ ನಿರಂಕುಶ ಪ್ರಭುತ್ವದ ಸೂಚನೆಗಳೂ ಇಲ್ಲಿವೆ. ಸಾವಿರಾರು ವರ್ಷಗಳಿಂದ ಹೊರಗಿನವರ ಧಾಳಿಗೆ ಸಿಲುಕಿ ನೈತಿಕ ಮತ್ತು ಬೌದ್ಧಿಕವಾಗಿ ಘಾಸಿಗೊಂಡ ಚೇತನದಿಂದ ಕೂಡಿ, ಇದೀಗ ತಾನೆ ಬಿಡುಗಡೆಯಿಂದ ಭಾರತೀಯ ಜನತೆ ತಮಗೆ ಕಾದಿರುವ ಭಯಂಕರ ವಿಧಿಯನ್ನು ಊಹಿಸಲಾರದವರೂ ಮುಂಗಾಣದವರೂ ಆಗಿ ತಮಗೆ ಸಾಮಾಜಿಕವಾಗಿಯೂ, ವೈಯಕ್ತಿಕವಾಗಿಯೂ ಸದ್ಯದಲ್ಲೇ ಕಾದಿರುವ ಹೀನಮಾನವತೆಯನ್ನು ಅರಿಯುವವರಾಗಿದ್ದಾರೆ.

ಈ ಪುಟ್ಟ ಹೊತ್ತಗೆಯು ಭಾರತೀಯರಿಗೂ ಹೊರಗಿನವರಿಗೂ, ಆತನ ಮಾನವೀಯತೆ, ಗಂಡುಗಲಿತನಗಳು (ಮನುವಿನಿಂದ ನಿರೂಪಿಸಲ್ಪಟ್ಟವು) ವೇದ್ಯವಾಗಲಿ ಎಂಬ ಉದ್ದೇಶದಿಂದ ಮಹಾನ್ ಚಿಂತಕನಾದ ಮನುವಿನ ಧರ್ಮಶಾಸ್ತ್ರವೆಂಬ ಗ್ರಂಥವನ್ನು ಪ್ರಪಂಚದ ಬಳಖೆಗೆ ಪ್ರಕಟಿಸಿದ್ದೇನೆ.

ಕೇವಲ್ ಮೋಟ್ವಾನಿ

Blank

ಪರಿವಿಡಿ

Blank

ಮನು: ಸಾಮಾಜಿಕ ಚಿಂತನೆಗಳ ಮೂಲ ಪುರುಷ

ಮನು

ಸಾಮಾಜಿಕ ಚಿಂತನೆಯ ಮೂಲಗಳು

ಭಾರತದ ಹಿಂದೂ ಜನರಿಗೆ ಸಾಂಪ್ರದಾಯಿಕವಾಗಿ ವೇದ, ಉಪನಿಷತ್ತುಗಳಲ್ಲಿ ಮನುಧರ್ಮ ಶಾಸ್ತ್ರ, ರಾಮಾಯಣ, ಭಾರತಗಳಲ್ಲಿ, ಪುರಾಣ, ಉಪವೇದ, ವೇದಾಂಗಗಳಲ್ಲಿ ಆಯುರ್ವೇದವೇ ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಅಸೀಮನಾದ ನಂಬಿಕೆ. ಅವು ದ್ರಷ್ಟಾರರಾದ ಋಷಿಗಳಿಂದ ಉಪದೇಶಿತವಾದುದೆಂದೂ, ವಿಶ್ವದ ಪರಮಸತ್ಯಗಳನ್ನು ಅವರು ತಮ್ಮ ಬಗೆಗಣ್ಣುಗಳಿಂದ ನಿಚ್ಚಳವಾಗಿ ಕಂಡು ಪರಿಮ ಸತ್ಯಗಳನ್ನು ಅವರು ತಮ್ಮ ಬಗೆಗಣ್ಣುಗಳಿಂದ ನಿಚ್ಚಳವಾಗಿ ಕಂಡು ತಿಳಿದವರೆಂದು ಭಾರತೀಯ ಹಿಂದೂಗಳು ನಂಬಿದ್ದರು. ಮನುಷ್ಯರ, ಅತಿಮಾನುಷರ ಮತ್ತು ಕಾಡುಕಪಿಗಳಲ್ಲಿ ಜೀವನದ ನಾನಾ ಪ್ರಕಾರಗಳಲ್ಲಿ ಕಂಡುಬರುವ ಅಂತರಂಗದ ಸಮಸ್ಯೆಗಳನ್ನು ಅವರು ತೆರೆದ ಪುಸ್ತಕದಂತೆ ಕಾಣಬಲ್ಲವರು. ಅವರ ಹೇಳಿಕೆಗಳು, ಕೃತಿಗಳು ರಹಸ್ಯಮಯವಾಗಿ ಸೂತ್ರರೂಪದಲ್ಲಿ ಮೂಡಿವೆಯಾದರೂ ಅವು ಜ್ಞಾನದ ಆಯಾ ಶಾಖೆಗಳಿಗೆ ತಳಹದಿಯಾಗುವ ನಿತ್ಯಸತ್ಯಗಳನ್ನು ತಿಳಿಸುತ್ತವೆ. ಅನಂತರ ಬಂದ ಸಂಶೋಧನೆಗಳು, ಸಿದ್ಧಾಂತಗಳು, ವಿವರಣೆಗಳು ವ್ಯಾಖ್ಯಾನಗಳು ಮುಂತಾದುವನ್ನು ನೋಡಿದರೆ, ಪೂರ್ವ, ಪಶ್ಚಿಮಗಳ ಅನೇಕ ವಿದ್ವಾಂಸರೂ ತತ್ತ್ವವೇತ್ತರು ಕೊಡುವ ವಿವರಣೆಗಳನ್ನು ಕಂಡರೆ ಅವು ನಮ್ಮ ಪ್ರಾಚೀನ ಮಹರ್ಷಿಗಳ ಕೃತಿಗಳಿಗೆ ರಚಿಸಿದ ಅಡಿಟಿಪ್ಪಣಿಗಳೆಂದು ಭಾವಿಸಬಹುದು. ಅವರುಗಳಲ್ಲಿ ಮನು ಒಬ್ಬ ಮಹರ್ಷಿ. ಭಾರತೀಯ ಹಿಂದುಗಳ ಮನೆಮನೆಗಳಲ್ಲಿ ಆತನು ಪೂಜ್ಯನು. ಅಷ್ಟೇ ಅಲ್ಲದೆ, ಪ್ರಪಂಚದ ಇತರ ದೇಶಗಳಲ್ಲಿ, ಪ್ರಾಚೀನರು ಆಧುನಿಕರು ಎನ್ನದೆ ಆತನ ಉಪದೇಶಗಳ ಪ್ರಭಾಗಕ್ಕೆ ಒಳಗಾಗಿ, ಆತನನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ ಎಂಬುದನ್ನು ನಾವಿಷ್ಟರಲ್ಲೇ ಕಾಣಬಹುದು.

ಮನು, ಮನಸ್, ಮಾನವ– ಇವೆಲ್ಲ ಶಬ್ದಗಳೂ ಸಂಸ್ಕೃತದ ಮೂಲ ಶಬ್ದ 'ಮನ' ಎಂಬುದರಿಂದ ಬಂದಿವೆ. 'ಮನ' ಎಂದರೆ ಆಲೋಚಿಸು ಎಂದರ್ಥ.

ಮನು ಒಬ್ಬ ಅಗ್ರಚಿಂತಕ. ಸಂಸ್ಕೃತ ಸಾಹಿತ್ಯದ ನಾನಾ ಸಂದರ್ಭಗಳಲ್ಲಿ ಅವನನ್ನು ಹಲವು ಬಗೆಯಾಗಿ ವರ್ಣಿಸಿದೆ. "ಆತನು ಮಾನವಕುಲದ ಮೂಲಪುರುಷ."

"ಆತನು ರಚಿಸಿದ ಶಾಸ್ತ್ರವು ಬಹಳ ಪೂಜ್ಯವಾದುದು." "ಮನುಸ್ಮೃತಿಗೆ ವಿರುದ್ಧವಾದ ಅಭಿಪ್ರಾಯಗಳನ್ನು ಒಪ್ಪತಕ್ಕದ್ದಲ್ಲ." "ಮನುವಿನ ಮಾತು ಭೇಷಜವೇ ಸರಿ." ಭಾರತೀಯ ಸಾಹಿತ್ಯದಲ್ಲಿ ಇವು ಅಲ್ಲಲ್ಲಿ ಚದುರಿ ಕಂಡುಬರುವ ಕೆಲವು ಸಾಕ್ಷ್ಯಗಳು. ಇವು ಆತನ ಅತಿಶಯವಾದ ಪ್ರಭಾವಕ್ಕೆ ನಿರ್ವಿವಾದವಾಗಿದೆ. ಆತನ ಉಪದೇಶಗಳಿಗೆ ಸಾಕ್ಷಿಯೂ ಆಗಿವೆ. ಪುರಾಣಗಳಲ್ಲಿ ಒಂದಂತೂ, ಮಾನವರ ಜೀವನ ನಾಟಕದಲ್ಲಿ ಮನುವಿನ ಪಾತ್ರವೇನೆಂಬುದನ್ನು ವ್ಯಾಪಕವಾಗಿ ಚಿತ್ರಿಸಿದೆ. ಅದರ ಪ್ರಕಾರ ಮಾನವ ಜೀವಿತನ ಕರ್ತವ್ಯಗಳು ಉಗಮ ವಿಕಾಸ ಮತ್ತು ಅಂತಿಮ ವಿಧಿಯನ್ನೂ, ಪ್ರಪಂಚಗಳ, ರಾಜ್ಯಗಳ, ಜನಾಂಗಗಳಲ್ಲಿ ಸಾಗುವ ಮಾನವಜೀವಿತದ ಅಖಂಡವಾದ ಸರಪಣಿಯನ್ನು ಆತನು ತಿಳಿದವನು ಎನ್ನುತ್ತದೆ. ಒಂದು ಪರಿಪೂರ್ಣ ಸಮಾಜವನ್ನು ರೂಪಿಸುವುದನ್ನು ಆತನು ತಿಳಿದವನು. ಅಲ್ಲದೆ, ಹಲವಾರು ಯುಗಗಳಲ್ಲಿ ಬಾಳಿ ಜನರಿಗೆ ಎಲ್ಲವನ್ನೂ ತಿಳಿಸಿ, ಯುಗಾಂತರಗಳ ಬದುಕಿಗೆ ಹಿನ್ನೆಲೆಯಾಗಿ ಉಳಿದು, ಜೀವನದ ಕ್ರಮವು ಸಾಮಾಜಿಕ ರೀತಿ–ನೀತಿಗಳು ಅಳಿಯದಂತೆ, ಚಿಕ್ಕ ವಯಸ್ಸಿನ ಜನರಿಗೆ ಎಲ್ಲವನ್ನೂ ತಿಳಿಸಿ ಹೇಳಿ, ಕಲಿಸಿ, ಇತರ ಸಪ್ತರ್ಷಿಗಳೊಡನೆ ಮನುವು ಹಿಂದಿನಿಂದ ಬಂದ ತಿಳುವಳಿಕೆಯ ಆಧಾರದಿಂದ ಕಾಲಕಾಲಕ್ಕೆ ಸಮಾಜ ಜೀವನದ ವಿಶೇಷವಾದ ಜ್ಞಾನವನ್ನು ಬೆಳೆಸಿ ಎಲ್ಲ ಕಾಲಕ್ಕೂ ಶಾಶ್ವತವಾದ ಮನುಕುಲದ ಮೂಲಪುರುಷನೆಂದು ಪ್ರಸಿದ್ಧನಾದನೆನ್ನುತ್ತದೆ.[೧] ಬೃಹಸ್ಪತಿಯ ಪ್ರಕಾರ 'ಸಾಮಾಜಿಕ ಚಿಂತಕರಲ್ಲಿ ಮನು ಅಗ್ರಪಂಕ್ತಿಯಲ್ಲಿ ನಿಲ್ಲತಕ್ಕವನು. ಏಕೆಂದರೆ ವೇದಗಳಿಗೆ ಸಾರವನ್ನೇ ಅವನು ತನ್ನ ಶಾಸ್ತ್ರಗ್ರಂಥದಲ್ಲಿ ಅಡಕಮಾಡಿದ್ದಾನೆ. ಮನುವಿನ ತರ್ಕವನ್ನಾಗಲಿ, ವ್ಯಾಕರಣವನ್ನಾಲೀ ವಿರೋಧಿಸಿದ ಶಾಸ್ತ್ರವನ್ನು ಅವನು ಗಣನೆಗೆ ತರಲಿಲ್ಲ. ಮನುವು ತಿಳಿಸಿದಂತೆ ನ್ಯಾಯಮಾರ್ಗದಲ್ಲಿ ಹಣ ಸಂಪಾದನೆ, ಗುಣಗಳ ಸಾಧನೆ ಕೊನೆಗೆ ಮುಕ್ತಿಮಾರ್ಗದ ಆನಂದಕ್ಕೆ ಪ್ರಯತ್ನ– ಹೀಗೆ ಯಾವುದೊಂದನ್ನೂ, ಅವನಿಗೆ ಸರಿಗಟ್ಟುವಂತೆ ಅಥವಾ ಅವನನ್ನು ಮೀರಿಸುವಂತೆ ಯಾರೇ ಪ್ರತಿಪಾದಿಸಲಿಲ್ಲ. ಹಾಗಾಗಿ ಮನುವಿನ ಧರ್ಮಶಾಸ್ತ್ರದ ಆಧಿಪತ್ಯವು ಎಷ್ಟೋ ಕಾಲದವರೆಗೆ ವಿರಾಜಮಾನವಾಯಿತು."[೨]

ಮನುಧರ್ಮ ಶಾಸ್ತ್ರವನ್ನು ಕ್ರೋಡೀಕರಿಸಿದ ಭೃಗುಋಷಿಯು ಮನುವನ್ನು "ವಿರಾಜಮಾನನಾದ ಸೃಷ್ಟಿಕರ್ತ" ಎಂದೂ ಪ್ರಪಂಚ ಮೂಲಪುರುಷನೆಂದೂ ಕರೆದಿದ್ದಾನೆ. ಮನುವನ್ನು ಸರ್ವಜ್ಞನೆಂದೆಸಿದ್ದಾನೆ. ವಿನಯದಿಂದ ಪ್ರಭುತ್ವವನ್ನು ಪಡೆದ ಒಡೆಯನೆಂದು ಕರೆದಿದ್ದಾನೆ. ಆತನು ಬ್ರಹ್ಮನಿಗೆ ಸಮಾನವೆಂದು ಪ್ರಶಂಸೆ ಮಾಡಿದ್ದಾನೆ. ಮನುವು ನಿರೂಪಿಸಿರುವ ಕಟ್ಟಳೆಗಳು ಸಂಪೂರ್ಣವಾಗಿ ವೇದಗಳಿಗೆ ಅನುಸಾರವಾಗಿವೆ, ಏಕೆಂದರೆ ಮನುವು ಎಲ್ಲವನ್ನೂ ಅರಿತ ಸರ್ವಜ್ಞ (೧೧–೭) ಎಂದಿದ್ದಾನೆ. "ಕೆಲವರು ಆತನನ್ನು ಅಗ್ನಿ ಎನ್ನುತ್ತಾರೆ, ಕೆಲವರು ಮನುವೆನ್ನುತ್ತಾರೆ, ಇತರರು ಸೃಷ್ಟಿಗೆ ಒಡೆಯನೆಂದಿದ್ದಾರೆ. ಇತರರ ಪಾಲಿಗೆ ಆತನು ಸಾಕ್ಷಾತ್ ಇಂದ್ರ, ಪ್ರಾಣ ಮತ್ತು ಅನಾದಿಯಾದ ಬ್ರಹ್ಮ" (XII–೧೨೩).

ಋಗ್ವೇದ ಮತ್ತು ಶ್ರೀಮದ್ಭಗವದ್ಗೀತೆಯಲ್ಲಿ ನಾಲ್ವರು ಮನುಗಳನ್ನು ಕುರಿತು ಹೇಳಿದೆ. ಆದರೆ ಮನು ಧರ್ಮಶಾಸ್ತ್ರದಲ್ಲಿ ಏಳು ಜನ ಮನುಗಳನ್ನು ಕುರಿತು ಹೇಳಿದೆ. ಅವರ ಹೆಸರುಗಳನ್ನು ಹೀಗೆ ಪಟ್ಟಿ ಮಾಡಬಹುದು ಸ್ವಂಭುವ, ಸ್ವೌಕಿಸ, ಔತ್ತವಿಂ, ತಮಸ್, ರೈವತ, ಚಕ್ಷುಷ. ಏಳನೆಯಾತನು ವೈವಸ್ವತ ಮನು. ಈ ಮನ್ವಂತರವನ್ನಾಳುವ ಅಧಿಪತಿ ಆತನೇ.

ಮನುವನ್ನು ಕುರಿತ ಈ ಎಲ್ಲ ವಿವರಗಳು ಅವನ ಕೃತಿಗಳು ಮತ್ತು ಮನುಗಳ ಸಂಖ್ಯೆ ಇವನ್ನೆಲ್ಲ ಪರಿಭಾವಿಸಿ ಒಂದು ನಿಶ್ಚಿತ ತೀರ್ಮಾನಕ್ಕೆ ಬರಬಹುದು. ಮೊದಲನೆಯದಾಗಿ ಆತನೊಬ್ಬ ಬಾಳಿ ಬದುಕಿದ್ದಂತಹ ಮನುಷ್ಯ– ಒಬ್ಬ ಋಷಿ. ಮಾನವರ ಕಲ್ಪನೆಯಲ್ಲಿ ಮೂಡಿದ ಪೌರಾಣಿಕ ಪಾತ್ರವಲ್ಲ. ತನ್ನ ಚಿಂತನೆ ಜ್ಞಾನಗಳಿಂದ ಅನಂತವಾದ ಕಾಲ ಪ್ರಭಾವಶಾಲಿಯಾದವನು. ತನ್ನ ಮನ್ವಂತರದಲ್ಲಿ, ಹಲವಾರು ದೇಶ ನಾಗರೀಕತೆಗಳನ್ನು ವ್ಯಾಪಿಸಿ, ಮಾನವಕುಲಕ್ಕೆ ಮಾರ್ಗದರ್ಶಿಯಾದವನು. ಎರಡನೆಯದಾಗಿ 'ಮನು' ಎಂಬ ಹೆಸರು ಅಥವಾ ಪದ ಅವನ ಅಧಿಕಾರವನ್ನು ಸೂಚಿಸುವುದು. ಆ ಅಧಿಕಾರ ಸಹ ಸಂಪೂರ್ಣ, ತಲಸ್ಪರ್ಶಿಯಾದ ವೇದಾಧ್ಯಯನದಿಂದ, ಆತನು ಮಾನವರ ಕುಲಕ್ಕೆ ಗುರುವಾದ ಕಾರಣ ಅವನಿಗೆ ಸಹಜವಾಗಿ ದೊರಕಿದ ಪದವಿ. ಈ ಅಭಿಪ್ರಾಯಕ್ಕೆ 'ಮೇಧಾತಿಥಿ' ಎಂಬ, ಅನಂತರ ಬಂದ ವ್ಯಾಖ್ಯಾನಕಾರನ ಅನುಮೋದನೆ ಇರುವುದು. ಆತನಿಂದ ಪವಿತ್ರವಾದ ವೈದಿಕ ಸಂಸ್ಕೃತಿಯು ಜನಜೀವನದಲ್ಲಿ ಹರಡಿ ಆಚರಣೆಯಲ್ಲಿರುತ್ತ ಸಮಾಜವನ್ನು ಸರ್ವತೋಮುಖವಾಗಿ, ಪರಿಪೂರ್ಣವಾಗಿ ಪಾಲಿಸಿದೆ ಎಂದನು.[೩] ಮೂರನೆಯದಾಗಿ, ಭಾರತದಲ್ಲಿರುವ ಹಿಂದೂಗಳನ್ನು ಮಾತ್ರವಲ್ಲ, ಬೇರೆ ಬೇರೆ ರಾಜ್ಯಗಳು, ಸಂಸ್ಕೃತಿಗಳು, ಪಂಗಡಗಳಲ್ಲಿರುವ ಜನರೂ ಸಹ ಮನುವಿನಿಂದ ಪ್ರಭಾವಿತರಾಗಿದ್ದಾರೆ. ಅವನ ಕಟ್ಟಳೆಗಳನ್ನು ಒಪ್ಪಿ ನಡೆಯುತ್ತಿದ್ದಾರೆ. ಮನುವು ಮಾನವಕುಲಕ್ಕೇ ಸೇರಿದವನು. ಭಾರತದ ಹಿಂದೂ ಜನರಿಗೆ ಮಾತ್ರ ಸೇರಿದವನಲ್ಲ. ಅವನ ಉಪದೇಶಗಳು ಕಾಲಾತೀತವಾದವು. ಮನುಷ್ಯರು ಎಲ್ಲೆಲ್ಲಿ ವಾಸಿಸಿದರೂ ಅಲ್ಲಿ ಅವರಿಗೆ ಉಪಯುಕ್ತವಾಗಿವೆ. ಮಾನವರೊಳಗಿನ ಶಾಶ್ವತವಾದ ಮನುಷ್ಯತ್ವಕ್ಕೆ ಅವನ ವಿಚಾರಗಳು ನೆಲೆಯಾಗಿವೆ.

ಧರ್ಮ

ಧರ್ಮಶಾಸ್ತ್ರವೆಂಬ ಒಂದು ಗ್ರಂಥದಲ್ಲಿ ಮನುವಿನ ಉಪದೇಶಗಳು ಅಡಕವಾಗಿವೆ. ಧರ್ಮವೆಂಬ ಶಬ್ದವು ಸಂಸ್ಕೃತದ 'ಧೃ' ಎಂಬ ಮೂಲದಿಂದ ಬಂದಿದೆ. 'ಧೃ' ಎಂದರೆ ಒಟ್ಟಾಗಿ ಹಿಡಿದಿರುವುದು. ಆದ್ದರಿಂದ ಧರ್ಮವೆಂದರೆ ಪರಸ್ಪರ ಸಂಬಂಧಿಸಿ, ಒಟ್ಟಾಗಿರುವುದು. ಸಂಕ್ಷೇಪವಾಗಿ ನಾವು ಆ ವಿಚಾರಕ್ಕೆ ಬರೋಣ.

ಎಲ್ಲಾದರೊಂದು ಪ್ರದೇಶದಲ್ಲಿ ಇಟ್ಟಿಗೆಗಳು, ಕಲ್ಲುಗಳು, ಕಬ್ಬಿಣದ ಚೌಕಟ್ಟುಗಳು, ಸಿಮೆಂಟು, ಮರ ಮುಂತಾದವು ಬಿದ್ದುಕೊಂಡಿರಬಹುದು. ಆದರೆ ಅವುಗಳಿಗೆ ಅರ್ಥವೂ, ಪ್ರಯೋಜನವೂ ಬರುವುದು ಅವನ್ನೆಲ್ಲ ಒಟ್ಟಾಗಿ ಸೇರಿಸಿ ಮನೆ ಕಟ್ಟಿದಾಗ. ಅದಷ್ಟೇ ಸಾಲದು, ಅಲ್ಲಿ ಅಡ್ಡಾದಿಡ್ಡಿಯಾಗಿ ಮೇಜು ಕುರ್ಚಿ ಮಂಚಗಳ ಬಿಡಿಭಾಗಗಳು ಬಿದ್ದಿರಬಹುದು. ಅವನ್ನೆಲ್ಲ ಒಟ್ಟುಮಾಡಿ ಅರ್ಥಪೂರ್ಣವಾಗಿ ಆಯೋಜಿಸಿದರೆ, ಬಳಸಿದರೆ ಸಾರ್ಥಕವಾಗಬಹುದು. ಅಲ್ಲಿಯೂ ಸ್ಥಳ, ಜೋಡಣೆ, ಉದ್ದೇಶಗಳ ಒಟ್ಟಂದವಿರಬಹುದು. ಅವುಗಳ ಬಳಕೆಯಾಗಬೇಕಾದರೆ ಅಲ್ಲಿ ಜೀವನ ಬೇಕು. ಅಲ್ಲಿಯದೇ ಒಂದು ಉದಾಹರಣೆ ನೋಡುವ, ಜೇನುಗೂಡಿನಲ್ಲಿರುವ ಜೇನ್ನೊಣಗಳು ಪರಸ್ಪರ ಸಂಪರ್ಕ ಸಾಧನೆಗೆ ತಮ್ಮ ರಕ್ಕೆ ಬಡಿಯುವ ವಿಧಾನ, ಚಲನೆಯನ್ನು ಬಳಸುತ್ತವೆ. ಒಂದು ಇನ್ನೊಂದರ ಭಾವವನ್ನು ಗ್ರಹಿಸಿ ಸ್ವತಂತ್ರವಾಗಿ ಹಾರಾಡುತ್ತವೆ. ಪ್ರತಿಯೊಂದು ಜೇನ್ನೊಣಕ್ಕೂ ಅದರದ್ದೇ ಆದ ಕರ್ತವ್ಯಗಳಿವೆ. ಕೆಲವು ಕಾವಲುಗಾರ ನೊಣಗಳು ಗೂಡನ್ನು ಕಾಯುತ್ತವೆ. ಅತಿಕ್ರಮಿಸಿದವರನ್ನು ಶಿಕ್ಷಿಸಲು ಕೆಲವು ಹೋರಾಟಗಾರರು ಇವೆ. ಮಕರಂದವನ್ನು ಸಂಗ್ರಹಿಸುವ ಜೇನ್ನೊಣಗಳು ಸುತ್ತಾಡಿ ಅದನ್ನು ಸಂಗ್ರಹಿಸಿ ತರುತ್ತವೆ; ಜೇನು ತಯಾರಿಕೆಗೆ ಅದೇ ಮೂಲವಸ್ತು. ರಾಣಿಜೇನು ಇವನ್ನೆಲ್ಲ ತನ್ನ ಪ್ರಭಾವದಲ್ಲಿ ಕಟ್ಟಿ ಆಳುತ್ತದೆ. ಇವೆಲ್ಲ ಒಟ್ಟುಪ್ರಯತ್ನದ ಪರಿಣಾಮ, ಜೇನು. ಆದರೆ ಅವುಗಳ ಸಾಮಾಜಿಕ ವ್ಯವಸ್ಥೆ ಬುದ್ಧಿಯಿಂದ ನಿರ್ದೇಶಿತವಾದುದಲ್ಲ. ಅಥವಾ ಮನುಷ್ಯರಂತೆ ಉತ್ತೇಜನಕ್ಕೆ ಪ್ರತಿಕ್ರಿಯೆ ಎಂಬುದಲ್ಲ. ಜೇನು ತಯಾರಿಕೆಯ ಈ ಒಟ್ಟಾದ ದುಡಿಮೆ, ಬಾಳುವೆಗಳು ಅವಕ್ಕೆ ಪ್ರವೃತ್ತಿ ಸಹಜವಾದ ಗುಣ. ವಂಶಪಾರಂಪರ್ಯವಾಗಿ ಹುಟ್ಟಿನೊಡನೆ ಬಂದುದು, ಜೀವದ ಗುಣ.

ಆದರೆ ಮಾನವ ಸಮಾಜದಲ್ಲಿ, ಪರಸ್ಪರ ಇಬ್ಬರಲ್ಲಿ ಅಥವಾ ಹಲವರಲ್ಲಿ ಸಂವಾದ–ಸಂಪರ್ಕಗಳ ಸಾಧ್ಯತೆ ಇದೆ. ಭಾಷೆಯ ಮೂಲಕ ಇದು ಸಾಧ್ಯ. ಭಾಷೆಯನ್ನು ಕಲಿಯಬಹುದು, ಸಾಧಿಸಿಕೊಳ್ಳಬಹುದು. ಅದು ನಮಗೆ ಪ್ರವೃತ್ತಿ ಸಹಜವಾಗಿ ಬಂದುದಲ್ಲ. ಹುಟ್ಟಿನಿಂದಲೇ ಪಡೆದದ್ದೂ ಅಲ್ಲ. ಅಂದರೆ ಅರ್ಥಪೂರ್ಣವಾದ ಸಂವಿಧಾನವನ್ನು ಪ್ರಚೋದನೆ ಮತ್ತು ಪ್ರತಿಕ್ರಿಯೆಗಳ ಮೂಲಕ ಸಾಧಿಸುತ್ತೇವೆ. ಇದಕ್ಕೆ ಮನಸ್ಸೇ ಸಾಧನ. ಇವೆಲ್ಲ ಸಂಪರ್ಕಗಳ ಅಂತಿಮ ಪರಿಣಾಮವೇ

ಧರ್ಮ, ಅಂದರೆ ಒಟ್ಟುಗೂಡಿ ಬಾಳುವುದು. ಹೀಗೆ ಮನುಧರ್ಮಶಾಸ್ತ್ರವು ಮನಸ್ಸು ಅಂದರೆ ಚಿಂತನೆಯನ್ನುಳ್ಳ ಮಾನವರ ನಡುವಿನ ಬಳಗವನ್ನು ಸಾಧಿಸುವುದು. ಸಾಮಾನ್ಯವಾಗಿ ಧರ್ಮದಲ್ಲಿ ನೀತಿಗೆ ಪ್ರಾಧಾನ್ಯವನ್ನು ಕೊಡುತ್ತೇವೆ. ಆದರೆ ನಾವು ಇಲ್ಲಿ ಅದರ ಮಾನಸಿಕ ಮತ್ತು ಸಾಮಾಜಿಕ ಪರಿಣಾಮಗಳನ್ನು ಕುರಿತು ವಿಚಾರ ಮಾಡಲಿದ್ದೇವೆ.

ಧರ್ಮ ಎಂಬ ಶಬ್ದವು ಮಾನವ ಜೀವನವನ್ನೂ ಮೀರಿದ ಸ್ತರವನ್ನು ಒಳಗೊಂಡಿರುವುದರ ಸೂಚನೆ ಇದೆ. ವಿಶ್ವದ ವ್ಯವಸ್ಥೆಯ ಕಡೆಗೆ ಅದು ಬೆರಳು ಮಾಡುತ್ತದೆ. ಅದು ಕಾನೂನನ್ನು ಕುರಿತು ಹೇಳುವುದು, ಜೀವನದ ಸಮಗ್ರತೆಯನ್ನು ಕುರಿತು, ಭೌತಿಕ ವಿಚಾರಗಳಲ್ಲಿ ನಡವಳಿಕೆಯನ್ನು ಕುರಿತು ಇದೆ. ಜೈವಿಕ, ಮಾನಸಿಕ, ಸಾಮಾಜಿಕ ಮತ್ತು ಅಧ್ಯಾತ್ಮ ಪರಿಧಿಗಳಲ್ಲಿ ವಿಚಾರ ಮಾಡುವುದು. ಅದು ಸಂಪೂರ್ಣ ವಿಶ್ವವನ್ನೇ ಹೊಕ್ಕು ವ್ಯಾಪಿಸಿಕೊಂಡಿದೆ. ಮಾನವ ಜೀವನಕ್ಕಿರುವ ಹಲವು ಆಯಾಮಗಳನ್ನು ಅದು ಒಟ್ಟುಗೂಡಿಸಿ ಯೋಜಿಸಿದೆ, ಖನಿಜಗಳ ವಿಷಯವಾಗಲಿ, ಸಸ್ಯಜೀವನವಾಗಲಿ, ಪ್ರಾಣಿಗಳ ವಿಚಾರವನ್ನಾಗಲೀ, ಮಾನುಷ, ಅತಿಮಾನುಷ ವಿಷಯವಾಗಲೀ ಸಹಜೀವನ ರೀತಿಯಲ್ಲಿ ಕೂಡಿ ವರ್ಣಿತವಾಗಿರುತ್ತದೆ. ಮನಸ್ಸಿನ ಹಲವು ನೆಲೆಗಳಾದ ಜಾಗ್ರತ್, ಸ್ವಪ್ನ, ಸುಷುಪ್ತಿಗಳನ್ನು ಕುರಿತಾಗಲಿ, ಜೀವನದ ನಾನಾ ಮಜಲುಗಳಾದ ವಿದ್ಯಾರ್ಥಿ, ಗೃಹಸ್ಥ, ಸಮಾಜಸೇವಕ, ಅಧ್ಯಾತ್ಮಗುರು ಹೀಗೆ ಬೇರೆ ಬೇರೆ ವಿಧಗಳ ಬದುಕು ಮಾನವ ಜೀವನದ ಸುಪುಷ್ಟತೆಗೆ ಅವಶ್ಯವೆನ್ನುತ್ತದೆ. ಮನುಷ್ಯ ಜೀವನದ ಈ ಎಲ್ಲ ಚಟುವಟಿಕೆಗಳು ಒಟ್ಟಾಗಿ ಕೂಡಿಕೊಂಡಾಗ ಸಾರ್ಥಕವೂ, ಅರ್ಥಪೂರ್ಣವೂ ಆಗುತ್ತದೆ. ಅದುವೇ ಧರ್ಮ. ಧರ್ಮವು ವಿಶ್ವವ್ಯಾಪಿ. ಅದೇ ನಿಯಮಾನುಸಾರ ಆಗಸದ ಗ್ರಹತಾರೆಗಳು ತಮ್ಮ ಪಥದಲ್ಲಿ ಸಂಚರಿಸುತ್ತವೆ. ಕಿರಿದರಲ್ಲಿ ಹೇಳುವುದಾದರೆ ಅದು ನಿತ್ಯಸತ್ಯವು ಪ್ರಕಟಗೊಳ್ಳುವ ಬಗೆ. ಏಕಮೇವಾದ್ವಿತೀಯವಾದ ಚೈತನ್ಯವು ಹಲವು ರೂಪ ತಾಳುವ ಬಗೆ. ಸೃಷ್ಟಿಯು ಅರಳುವ ಬಗೆಯೇ ನಿಯಮ ಅಥವಾ ಧರ್ಮ. ಧರ್ಮವನ್ನು ನಾವು ಸಮರ್ಥವಾಗಿ ಅರಿಯಬೇಕಾದರೆ, ಮೂಲದಿಂದ ರೂಪ ತಾಳಿ ಅದು ಬಗೆಬಗೆಯಾಗಿ ಅರಳುವ ಮಾದರಿಯನ್ನು ಒಟ್ಟಂದದಲ್ಲಿ ಕಾಣಬೇಕು. ಮಾನವ ಜೀವಿತದ ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ, ಧರ್ಮವು ಹಲವಾರು ಅಂಶಗಳನ್ನು ಒಟ್ಟುಗೂಡಿಸುತ್ತದೆ. ಹಲವು ಶಕ್ತಿಗಳನ್ನು ಮನುಷ್ಯರನ್ನು, ದೇಶದೇಶಾಂತರಗಳನ್ನು, ಘಟನೆಗಳು–ಸಾಧನೆಗಳನ್ನು, ಸಾಮಾಜಿಕ ಸಂಸ್ಥೆಗಳು, ಮೌಲ್ಯಗಳು, ಗುರಿಗಳು ಎಲ್ಲವನ್ನೂ ಸುವ್ಯವಸ್ಥಿತವಾಗಿ, ಏಕಮುಖವಾಗಿ ಜೀವನ ಸಾರ್ಥಕ್ಯದ ಕಡೆಗೆ ಹೊಂದಾಣಿಕೆಯಿಂದ ನಡೆಗೆ ಗೆಲುವು ಪಡೆಯುತ್ತದೆ– ಅದಕ್ಕಾಗಿ ಹವಣಿಸುತ್ತದೆ.[೪]

ಶಾಸ್ತ್ರ

ಮನುವಿನೊಡನೆ ಸರ್ವದಾ ಸೇರಿಕೊಂಡಿರುವ ಇನ್ನೊಂದು ಶಬ್ದವೆಂದರೆ ಶಾಸ್ತ್ರ. ಹಾಗೆಂದರೆ ಒಂದು ವಿಚಾರವನ್ನು ಕುರಿತ ಆಮೂಲಾಗ್ರವಾದ ಗ್ರಂಥವೆನ್ನಬಹುದು. ಈಗ ಸದ್ಯದಲ್ಲಿರುವ ಗ್ರಂಥವು ಮೂಲ ಗ್ರಂಥದ ಸಂಕ್ಷೇಪವೆಂದು ತಿಳಿಯುತ್ತದೆ. ಮೂಲದಲ್ಲಿ ಅದು ಒಂದು ಲಕ್ಷ ಶ್ಲೋಕಗಳನ್ನುಳ್ಳದ್ದಾಗಿತ್ತೆಂದು, ಅದು ಇಪ್ಪತ್ನಾಲ್ಕು ವಿಷಯಗಳನ್ನು ಕುರಿತು ವಿಚಾರಮಾಡಿದ್ದಿತು, ಅವನ್ನೆಲ್ಲ ಒಂದು ಸಾವಿರ ಅಧ್ಯಾಯಗಳಲ್ಲಿ ನಿರೂಪಿಸಿದ್ದಿತು ಎಂದು ತಿಳಿದು ಬರುತ್ತದೆ. ಈಗ ನಮಗೆ ದೊರಕಿರುವ ಕೃತಿಯಲ್ಲಿ ೨೬೮೫ ಶ್ಲೋಕಗಳಿವೆ. ಬಹುಶಃ ಎಲ್ಲ ಕೃತಿಗಳೂ ಕಾಲಾನುಕಾಲಕ್ಕೆ ಸಂಕ್ಷೇಪವಾಗುತ್ತ ಹೋಗುತ್ತಿದ್ದುವು, ಮತ್ತು ನೂತನ ಕಾಲದ ಕೆಲವು ವಿಚಾರಗಳು ಅಲ್ಲಿ ಸೇರ್ಪಡೆಯಾಗುತ್ತಿದ್ದುವೆಂದು ಕಾಣುತ್ತವೆ. ಈಗ ನಮಗೆ ದೊರಕಿರುವುದು ಇದ್ದುದರಲ್ಲಿ ಒಂದು ಆಧುನಿಕವಾದ ಪ್ರತಿ."[೫] ಕೃತಿಯ ಗಾತ್ರವು ಹೇಗೇ ಇರಲಿ, ಪ್ರಾಚೀನ ಕಾಲದಿಂದ ಹೊಸ ವಿಷಯಗಳ ಸೇರ್ಪಡೆಗೂ, ಕೆಲವು ವಿಚಾರಗಳನ್ನು ಕೈಬಿಡುತ್ತಲೂ ಉಳಿದುಕೊಂಡಿದೆ. ಈ ಸಂದರ್ಭದಲ್ಲಿ ಮೂಲತತ್ತ್ವಗಳಲ್ಲಿ ನಿಷ್ಠೆಯನ್ನು ತೊರೆಯದೆ ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಳ್ಳುತ್ತ ಸಾಗುವ ಹಿಂದೂ ಜನಾಂಗದ ಪ್ರತಿಭೆಗೆ ಗ್ರಂಥವು ಸಾಕ್ಷಿಯಾಗಿದೆ. ಈಗ ನಮ್ಮಲ್ಲಿರುವುದು ನಿಯಮಾವಳಿಗಳನ್ನು, ಸಂಪ್ರದಾಯಗಳನ್ನು, ಆಚಾರಗಳನ್ನು ಕುರಿತ ಸಂಹಿತೆ. ಅದು ಕಾಲನಿಂದ ಪರೀಕ್ಷಿತವಾಗಿ ಪಕ್ವವಾದ ಸಾರವತ್ತಾದ ವಿಚಾರಗಳೆಂದು ಹೇಳಬಹುದು.

ನಮ್ಮಲ್ಲಿ ಪ್ರಚಾರದಲ್ಲಿರುವ ಮನುಧರ್ಮಶಾಸ್ತ್ರದ ಇಂಗ್ಲಿಷ್ ಭಾಷೆಗೆ ತರ್ಜುಮೆಗೊಂಡ ಕೃತಿ– ಮನುವಿನಿಂದ ಪ್ರತಿಪಾದಿತವಾದ ಕಾನೂನುಗಳು ಎಂಬುದು ಅಪಾರ್ಥವನ್ನುಂಟುಮಾಡುವ ಸಂಭವವಿದೆ. ಮನುವು ಬರಿಯ ಕಾನೂನಿನ ಪ್ರತಿಪಾದಕನಲ್ಲ ಅಥವಾ ಅದನ್ನು ರೂಪಿಸಿದವನಲ್ಲ. ಆದರೂ ಆತನು ಹೇಳುವ ಸಾಮಾಜಿಕ ನಿಯಮಗಳು ಹಿಂದೂಗಳ ಜೀವನದ ಎಲ್ಲ ಪಾರ್ಶ್ವಗಳನ್ನು ಕುರಿತಿವೆ. ಹಾಗೆಯೇ ಕಾನೂನನ್ನೂ ಕುರಿತಿದೆ. ನಾವು ಕಂಡಂತೆ ಮನುವೇ ಮಾನವರ ಮೊದಲ ಗುರು. ಜೀವನಕಲೆಯನ್ನು ಶಾಸ್ತ್ರಗಳ ಉಪಯುಕ್ತತೆಯನ್ನು ಅವುಗಳೆರಡರ ಪರಿಪೂರ್ಣ ಹೊಂದಾಣಿಕೆಯ ಬಗೆಯನ್ನು ತಿಳಿಸಿದವನು ಆತನೇ. ಧರ್ಮದ ತಳಹದಿಯನ್ನು ಅವಲಂಬಿಸಿ, ಸಾಮಾಜಿಕ ಜೀವನದ ಪೂರ್ಣತೆಯ ಸಾಧನೆಗೆ ನಾಲ್ಕು ಆಶ್ರಮಗಳನ್ನು ರೂಪಿಸಿ, ಮನುಜರ ಮನಸ್ಸಿಗೆ ಮಾರ್ಗದರ್ಶನ ಮಾಡಿದವನು ಮನುವೇ. ಆತನ ಹೇಳಿಕೆಗಳು ಕಾನೂನಿನ ಬಂಧನವನ್ನು ಹೇರುವುದಿಲ್ಲ. ಆತನ ನಿರೂಪಣೆಗಳು ಸಮಾಜಜೀವನದ ಸರ್ವತೋಮುಖವಾದ ಹೊಂದಾಣಿಕೆಗೆ

ಆಧ್ಯಾತ್ಮದ ಉನ್ನತಿಗೆ ಸಹಾಯಕವಾಗಿ ಯಾರೂ ಮೀರಲು ಬಯಸದಂತೆ ಪ್ರತಿಪಾದಿತವಾಗಿದೆ.

ಮೂಲ ಕೃತಿಯ ಕಾಲದೇಶಗಳು

ಸರ್ ವಿಲಿಯಂ ಜೋನ್ಸರು ೧೭೯೦ರಲ್ಲಿ ಮನುಧರ್ಮಶಾಸ್ತ್ರವೂ ಸೇರಿ ಕೆಲವು ಸಂಸ್ಕೃತ ಕೃತಿಗಳನ್ನು, ಇಂಗ್ಲಿಷ್ ಭಾಷೆಗೆ ಅನುವಾದಿಸಿ ಪ್ರಕಟಿಸಿದರು. ಇದು ಆ ಕಾಲಕ್ಕೆ ಯೂರೋಪಿನಲ್ಲಿ ಭಾವನಾಸ್ವಾತಂತ್ರ್ಯ ಪಂಥಕ್ಕೆ ಇಂಬುಗೊಟ್ಟಿತು. ಏಷ್ಯ, ಯೂರೋಪು ಮತ್ತು ಅಮೆರಿಕಗಳ ವಿದ್ವಾಂಸರಲ್ಲಿ ಸಂಸ್ಕೃತ ಭಾಷೆ, ಸಾಹಿತ್ಯಗಳನ್ನು ಕಲಿಯುವ ಆಕರ್ಷಣೆ ಉಂಟಾಯಿತು. ಹೀಗೆ ವ್ಯಾಸಂಗದಲ್ಲಿ ತೊಡಗಿದ ವಿದ್ವಾಂಸರು ಅಸಂಖ್ಯಾತವಾದರು. ಅದರಲ್ಲಿ ನಾವು ಎರಡು ಬಗೆಯನ್ನು ಕಾಣಬಹುದು. ಮೊದಲ ಗುಂಪಿನಲ್ಲಿ ಅವರು ಸಂಪ್ರದಾಯನಿಷ್ಠರಾಗಿ ಬೆಳೆದದ್ದು ಕಾಣುತ್ತದೆ. ಲೌಕಿಕವಾದ, ಯಾಂತ್ರಿಕವಾದ ಜನಾಂಗೀಯ ದೃಷ್ಟಿ ಮತ್ತು ಅಂದಿನ ಕಾಲಕ್ಕೆ (ಕಳೆದ ಶತಮಾನದಲ್ಲಿ) ಯೂರೋಪಿನಲ್ಲಿ ವಾಡಿಕೆಯಾಗಿದ್ದ ದೇಶಪ್ರೇಮ ಆದರ್ಶಗಳ ಕಲ್ಪನೆ ಇದ್ದವರು ಎನ್ನಬಹುದು. ಇನ್ನೊಂದು ಗುಂಪಿನಲ್ಲಿ ಭಾರತದ ಜನಜೀವನ ಮತ್ತು ಆಲೋಚನೆ ಭಾವನೆಗಳ ನೇರವಾದ ತಿಳುವಳಿಕೆಯೂ, ಅದರ ಪ್ರಾಚೀನವಾದ ಗಹನವಾದ ಸಂಪ್ರದಾಯಗಳಲ್ಲಿ ಪ್ರನಿಷ್ಠರಾದವರು ಇದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಮೊದಲನೆಯ ಗುಂಪಿನ ನಾಯಕರು ಮಾಕ್ಸ್ ಮುಲ್ಲರ್. ಎರಡನೆಯ ಗುಂಪಿನಲ್ಲಿ ಎಚ್.ಪಿ. ಬ್ಲಾವಟ್ಸ್ಕಿ, ಸ್ವಾಮಿ ದಯಾನಂದ ಸರಸ್ವತಿ ಮತ್ತು ಶ್ರೀ ಅರಬಿಂದೋ ಇದ್ದಾರೆ. ಇವೆರಡೂ ಗುಂಪಿನ ವಿಚಾರಗಳಲ್ಲಿ ಕಂಡುಬರುವ ಸೂಕ್ಷ್ಮವಾದ ವಿರುದ್ಧ ವಿಚಾರಗಳನ್ನು ಇಲ್ಲಿ ಚರ್ಚಿಸುವುದು ಸಾಧ್ಯವಿಲ್ಲ. ಮುಖ್ಯವಾಗಿ ಅದರಲ್ಲಿ ಕಂಡುಬಂದ ಮೂರು ವಿಚಾರಗಳು ಹೀಗಿವೆ. ಒಂದು ಸಂಸ್ಕೃತದ ಪ್ರಾಚೀನ ಸಾಹಿತ್ಯದ ವ್ಯಾಖ್ಯಾನ ವಿವರಣೆಗಳು, ಎರಡು ಅವು ರಚಿತವಾದ ಕಾಲ, ಮೂರು ಅವು ಸೃಷ್ಟಿಯಾದ ಸ್ಥಳ. ಇಲ್ಲಿ ಅಂದು ಕಂಡುಬಂದ ಪರಿಸ್ಥಿತಿಯನ್ನು ಸ್ಥೂಲವಾಗಿ ಹೇಳಬಹುದಷ್ಟೆ.

ಮೊದಲ ಗುಂಪಿನವರ ವ್ಯಾಖ್ಯಾನದಲ್ಲಿ, ಅಂದಿನ ಕಾಲಕ್ಕೆ ಯೂರೋಪಿನಲ್ಲಿ ವ್ಯಾಪಿಸಿದ್ದ ಅಸಮರ್ಪಕವಾದ ತಿಳುವಳಿಕೆಯು ಕಾರಣವಾಗಿದ್ದಿತು. ಅದನ್ನು ವಿಶೇಷವಾಗಿ ಅವಲಂಬಿಸಿಕೊಂಡ ಮಾಕ್ಸ್ ಮುಲ್ಲರನು ಇತರರಂತೆ, "ಮಾನವ ಜನಾಂಗದ ಪ್ರಾರಂಭ ಕಾಲದ ಹರಟೆಯಾಗಿದೆ" ಎಂದು ಭಾವಿಸಿದ್ದನು. ಆದರೆ ಎರಡನೇ ಗುಂಪಿನ ಜನರು ಆಮೂಲಾಗ್ರವಾದ ತಿಳಿವಳಿಕೆಯುಳ್ಳವರಾದ್ದರಿಂದ ಇದನ್ನೊಪ್ಪದೆ, ಸಂಪೂರ್ಣ ಸಂಸ್ಕೃತ ಸಾಹಿತ್ಯವು ಅತ್ಯಾಧುನಿಕವಾದ, ಆಧ್ಯಾತ್ಮಿಕ ಸಾಧನೆಗಳನ್ನು ಪ್ರತಿಬಿಂಬಿಸುತ್ತದೆ ಎಂಬುದಾಗಿಯೂ ಖಗೋಳಶಾಸ್ತ್ರದಿಂದ ಹಿಡಿದು,

ಆಕಾಶ ಕಾಯಗಳ ಪಂಚಾಂಗವನ್ನೂ ಪ್ರಾಣಿ ಶಾಸ್ತ್ರವನ್ನು ಸಹ ವ್ಯಾಪಕವಾಗಿ ತಿಳಿದಿದೆ ಎಂದು ಭಾವಿಸಿದರು. ಅವು ಮಹಾಜ್ಞಾನಿಗಳಾದ ಋಷಿಗಳ ವಿದ್ವತ್ಕೃತಿಗಳೇ ಹೊರತು ಆದಿಮಾನವನ ವಿಚಾರಗಳು ಎಂದು ಅಭಿಪ್ರಾಯಪಟ್ಟರು.

ಎರಡನೆಯದಾಗಿ, ಈ ಕೃತಿಯು ರಚಿತವಾದ ಸ್ಥಳ, ಪುರಾಣಗಳಲ್ಲಿ ಉಕ್ತವಾದ ಭರತ ವರ್ಷದಲ್ಲಿ, ಅದು ಇಂದಿನ ಏಷ್ಯಾಖಂಡದ ಬಹುಭಾಗವನ್ನು ವ್ಯಾಪಿಸಿದ್ದಿತು. ಭಾರತ, ಪಾಕೀಸ್ಥಾನವೆಂದು ಇಬ್ಭಾಗವಾಗುವುದಕ್ಕೂ ಮೊದಲು ಭೌಗೋಳಿಕವಾಗಿ ಏಷ್ಯದ ಮಧ್ಯಪ್ರಾಂತಗಳನ್ನು ಅದು ಒಳಗೊಂಡ ಭಾಗವಾಗಿದ್ದಿತು. ವಿಷ್ಣುಪುರಾಣ ಮತ್ತು ಮತ್ಸ್ಯಪುರಾಣಗಳಲ್ಲಿ ಇದರ ಉಲ್ಲೇಖವಿದೆ. ಹೀಗಾಗಿ ಆಧುನಿಕ ಅಥವಾ ಸಮಕಾಲೀನ ಉತ್ಖನನಶಾಸ್ತ್ರಜ್ಞರು, ಸುಪ್ರಸಿದ್ಧ ವಿದ್ವಾಂಸರು ಸಾಕಷ್ಟು ಶ್ರಮ ವಹಿಸಿ, ಇದನ್ನು ಅನುಮೋದಿಸಿದ್ದಾರೆ. ಪುರಾಣಗಳಲ್ಲಿ ಹೇಳಲಾದ ವಿಚಾರಗಳನ್ನು ಆಧಾರಸಹಿತವಾಗಿ ಪ್ರತಿಪಾದಿಸಿದ ಮಹನೀಯರಲ್ಲಿ ಶ್ರೀ ಬಾಲಗಂಗಾಧರ ತಿಲಕ್ ಮತ್ತು ಗೋರ್ಡನ್ ಶಿಲ್ಡೆ (Gordon Childe) ಮತ್ತು ಇತರರು ಇದ್ದಾರೆ.

ಮೂರನೆಯದಾಗಿ, ಮಾಕ್ಸ್ ಮುಲ್ಲರ್ ಮುಂತಾದ ಮಹನೀಯರಿಂದ ಪ್ರತಿಪಾದಿಸಲ್ಪಟ್ಟ ಕೃತಿಯ ಕಾಲವಿಚಾರವು ಅಸಮರ್ಪಕವಾದದ್ದು ಮತ್ತು ಬರಿಯ ಊಹಾಪೋಹಗಳಿಂದ ಕೂಡಿದುದು.

ಮಧ್ಯಯುಗದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ಉಷರ್ (Usher) ಎಂಬ ಮಹನೀಯನಿಂದ ಸೂಚಿತವಾಗಿದ್ದ ಕಾಲಗಣನೆ ಅದಾಗಿದ್ದಿತು. ಆತನ ಅಭಿಪ್ರಾಯದಂತೆ ನಮ್ಮ ಭೂಗ್ರಹವು ಕ್ರಿ.ಪೂ. ೪೦೦೪ನೆಯ ವರ್ಷದಲ್ಲಿ ರೂಪತಳೆಯಿತು. ಪಾಶ್ಚಾತ್ಯರಾದ ಭಾರತೀಯ ತತ್ತ್ವವೇತ್ತರು ವೇದಗಳ ರಚನೆಗೆ ಕ್ರಿ.ಪೂ. ೧೨೦೦ರಿಂದ ೧೦೦೦ವರೆಗಿನ ಕಾಲವನ್ನು ಕೊಡುವುದು ಸಾಧ್ಯವಾಯಿತು. ಆದರೆ ಈಗಿನ ಉತ್ಖನನಶಾಸ್ತ್ರಜ್ಞನ ಬಗೆತಕ್ಕೆ, ಭೂಮಿಯ ಆಳದಲ್ಲಿ ಹುದುಗಿಹೋದ ಎಷ್ಟೋ ನಾಗರಿಕತೆಗಳು ದರ್ಶನ ಕೊಟ್ಟಿವೆ. ಅವುಗಳಲ್ಲಿ ಮುಖ್ಯವಾದವು ಪಶ್ಚಿಮ ಏಷ್ಯದಲ್ಲಿ ಕಂಡುಬಂದ ಸುಮೇರಿಯನ್ ನಾಗರಿಕತೆ ಮತ್ತು ಸಿಂಧೂ ಕಣಿವೆಯಲ್ಲಿ ಕಂಡುಬಂದ ಹರಪ್ಪ, ಮೊಹೆಂಜೊದಾರೋಗಳ ನಾಗರಿಕತೆ. ಇದರಿಂದ ಭಾರತೀಯರ ಇತಿಹಾಸಕ್ಕೆ ಪಾಶ್ಚಿಮಾತ್ಯರು ನಿಗದಿಪಡಿಸಿದ ಕಾಲವು ಅರ್ಥಶೂನ್ಯವಾಗಿ ಪರಿಣಮಿಸಿತು. ಪ್ರಾಚೀನವಾದ ಈ ನಾಗರಿಕತೆಗಳ ಕಾಲ ಕ್ರಿ.ಪೂ. ೩೦೦೦ ವರ್ಷಗಳಿರಬೇಕೆಂದು ಅವರು ಊಹಿಸಿದರೂ ಅದೂ ಕೂಡ ಸಮರ್ಪಕವಾಗದು. ಏಕೆಂದರೆ ಉತ್ಖನನಶಾಸ್ತ್ರಜ್ಞರು ಅವುಗಳ ಇರವನ್ನು ಗಮನಿಸುವ ವೇಳೆಗಾಗಲೇ ಅವು ಬೆಳೆದು ಅಭಿವೃದ್ಧಿಯಾಗಿದ್ದವು. ಅವು ತೊಡಗಿದ ಕಾಲ ಯಾವುದೆಂಬುದು ರಹಸ್ಯವಾಗಿಯೇ ಉಳಿದಿದೆ.

ಅನೇಕ ವಿದ್ವಾಂಸರು, ಪ್ರಾಚೀನ ನಾಗರಿಕತೆಗಳ ಕಾಲಗಣನೆಯಲ್ಲಿ ನಿಪುಣರು. ಹಲವು ಬಗೆಯಾದ ಪ್ರಯತ್ನಗಳನ್ನು ಕೈಗೊಂಡಿದ್ದಾರೆ. ಅವರು ಇಂಗಾಲ–೧೪ ಎಂಬ ಪರೀಕ್ಷೆಯನ್ನು ಕೈಗೊಂಡು ಸಸ್ಯದ ಪಳೆಯುಳಿಕೆಗಳ ಅಸ್ಥಿಗಳನ್ನು ಪರೀಕ್ಷಿಸಿ ಕಾಲವನ್ನು ನಿರ್ಧರಿಸುತ್ತಾರೆ. ಜೊತೆಗೆ ಖಗೋಳಶಾಸ್ತ್ರ, ಉತ್ಖನನಶಾಸ್ತ್ರ, ಮಾನವ ಶಾಸ್ತ್ರ, ಮಾನವಕುಲದ ಧಾರ್ಮಿಕ ಪದ್ಧತಿಗಳು, ಭಾಷಾವಿಜ್ಞಾನ ಮತ್ತು ಪುರಾಣಗಳು ಇವನ್ನು ಅಭ್ಯಸಿಸುತ್ತಾರೆ. ಜನರು ವಲಸೆ ಹೋದ ಸಂಗತಿಗಳನ್ನು ಗುರುತಿಸಿ, ಅವರು ಇತರರೊಡನೆ ಮಿಲನಗೊಂಡ ಬಗೆಯನ್ನು ವಿಚಾರ ಮಾಡಿ ಕೆಲವು ತೀರ್ಮಾನಗಳಿಗೆ ಬಂದಿದ್ದಾರೆ. ಬಹುಶಃ ಜೀವಶಾಸ್ತ್ರದಲ್ಲಿ ನಮ್ಮ ವಿಜ್ಞಾನಿಗಳ ಅತ್ಯಾಧುನಿಕವಾದ ಬೆಳವಣಿಗೆಯೂ ಹಿಂದೂ ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಾಚೀನ ಕಾಲವನ್ನು ಕಾಣಲು ಸಹಕಾರಿಯಾಗಬಹುದು.

ಇತರ ಮಾನವ ಕುಲಗಳಲ್ಲದೆ, ಎರಡು ಮುಖ್ಯವಾದ ಮಾನವ ಜನಾಂಗಗಳ ನಡುವೆ ಘರ್ಷಣೆ ನಡೆದುದಕ್ಕೆ ಐತಿಹಾಸಿಕ ಆಧಾರಗಳು ದೊರೆಯುತ್ತವೆ. ಇಂತಹ ಘರ್ಷಣೆಯು ಭಾರತದಲ್ಲಿ ಬಹು ಪೂರ್ವಕಾಲದಲ್ಲಿ ಆರ್ಯರು ಮತ್ತು ದ್ರಾವಿಡರ ಮಧ್ಯೆ ನಡೆದಿದೆ. ಕಾಲಕ್ರಮೇಣ ಅವರಲ್ಲಿ ಸೇರ್ಪಡೆಯೂ ಆಗಿ, ಇಂದಿಗೆ ದಕ್ಷಿಣ ಭಾರತದ (ಬಹಳ ಹಿಂದೆ ದ್ರಾವಿಡರ ನೆಲೆಯಾಗಿದ್ದುದು) ಜನ ಉತ್ತರದಲ್ಲಿ ನೆಲೆಸಿದ್ದ ಆರ್ಯರೊಡನೆ ಮಿಲನ ಹೊಂದಿ, ಭಾಷೆ ಮಾತ್ರದಿಂದ, ತಮಿಳು ಅವರು ಇನ್ನೊಂದು ಜನಾಂಗದ ಮೂಲದಿಂದ ಬಂದವರೆಂದು ತಿಳಿಯುತ್ತದೆ. ಅದು ಬಿಟ್ಟರೆ ಬಣ್ಣದಲ್ಲಿ ಮುಖಚಹರೆಗಳಲ್ಲಿ ತಲೆಬುರುಡೆಯ ಆಕಾರದಲ್ಲಿಯಾಗಲಿ, ಅವರಿಗೂ ಉತ್ತರದ ಸೋದರರಾದ ಆರ್ಯರಿಗೂ ವ್ಯತ್ಯಾಸವೇ ತೋರದು. ಬುದ್ಧಿಶಕ್ತಿಯಲ್ಲಿ ವಿದ್ಯಾಸಾಧನೆಗಳಲ್ಲಿ ಅವರು ಆರ್ಯರಿಗೆ ಸಮನಾಗಿ, ಅಷ್ಟೇಕೆ ಇನ್ನೂ ಉತ್ತಮರಾಗಿ ಪರಿಣಮಿಸಿದ್ದಾರೆ. ಆಧುನಿಕ ಜೀವಶಾಸ್ತ್ರದ ರೀತ್ಯಾ, ಒಂದು ಜನಾಂಗದ ಭೌತಿಕ ಲಕ್ಷಣಗಳು ಮಾರ್ಪಾಡಾಗಬೇಕಾದರೆ, ನಾನೂರು ವರ್ಷಗಳು ಹಿಡಿಯುತ್ತವೆ. ನಾನಿದನ್ನು ಅನುಮೋದಿಸುವುದಾದರೆ ದ್ರಾವಿಡರ ಮುಖ ಲಕ್ಷಣಗಳು ಹೀಗೆ ಸಂಪೂರ್ಣವಾಗಿ ಬದಲಾಗಲು ಸಾವಿರಾರು ವರ್ಷಗಳು ಹಿಡಿದಿರ ಬಹುದೆಂದು ತೋರುತ್ತದೆ. ಹೀಗೆ ದೈಹಿಕ ವರ್ಣ ಮತ್ತು ಲಕ್ಷಣಗಳು ಹೊಂದಿಕೊಳ್ಳುವ ಸೇರಿಹೋಗುವ ಪರಿ ಸಹಜವಾಗಿ ನಿಧಾನವಾಗಿ ನಡೆಯುವ ಕ್ರಿಯೆಯೇ ಹೊರತು, ಪ್ರಯತ್ನಪೂರ್ವಕವಾದುದಲ್ಲ. ಆದುದರಿಂದ ನಾನೂರು ವರ್ಷಗಳ ಅವಧಿಯು ನೂರಾರು ಬಾರಿಯಾದರೂ ಬಂದಿರಬೇಕೆಂದು ಊಹಿಸುವುದು ಕ್ಷೇಮವೆಂದು ತೋರುತ್ತದೆ. ಪ್ರಾಚೀನ ದ್ರವಿಡರು ಆಧುನಿಕ ತಮಿಳು ಜನಾಂಗವಾಗಲು ಸುಮಾರು ನಲವತ್ತು ಸಾವಿರ ವರ್ಷಗಳೇ ಸಂದಿರಬಹುದು. ಈ ಕಾರಣದಿಂದ ಸಂಸ್ಕೃತ ಸಾಹಿತ್ಯವನ್ನು ಭಾರತಕ್ಕೆ ತಂದ

ಆರ್ಯ ಕಾಲವನ್ನು ನಾವು ಸಹಜವಾಗಿಯೇ ಇನ್ನೂ ಹಿಂದಕ್ಕೆ, ಬಹಳ ಹಿಂದಕ್ಕೆ, ಒಯ್ಯಬೇಕಾಗುವುದು. ಸಂಸ್ಕೃತ ಸಾಹಿತ್ಯವು ನಿಜವಾಗಿ ಎಂದು ಮೊದಲಿಟ್ಟರು ಎಂಬ ಊಹೆಯನ್ನು ನಾವಿದುವರೆಗೆ ತಿಳಿದಿರುವ ಅನುಭವಾತ್ಮಕ ವಿಧಾನಗಳಿಂದ ಮಾಡಲು ಸಾಧ್ಯವಾಗದು.

ಮನುವಿನ ಸಾಮಾಜಿಕ ಚಿಂತನೆಗಳು

ಉತ್ತಮ ಗ್ರಹಣ ಶಕ್ತಿಯುಳ್ಳ ಒಬ್ಬ ಸಮಾಜ ಶಾಸ್ತ್ರದ ವಿದ್ಯಾರ್ಥಿಗೆ ಮನುವಿನ ಗ್ರಂಥದ ಮೊದಲ ಅಧ್ಯಾಯವು ಅವನ ಉಪದೇಶಗಳ ಸಾರವೆಂಬಂತೆ ತೋರುತ್ತದೆ. ಮನುವು ನಿರ್ಗುಣ ಬ್ರಹ್ಮನನ್ನು ಕುರಿತು ಹೇಳುತ್ತ ತನ್ನ ಕೃತಿಯನ್ನು ಪ್ರಾರಂಭಿಸಿದ್ದಾನೆ. ನಿರ್ಗುಣ ಬ್ರಹ್ಮನು ವಿಶ್ವದ ಸೃಷ್ಟಿಗೆ ಅನಿಮಿತ್ತ ಕಾರಣಕರ್ತನು. ಅವನಿಂದ ರೂಪು ತಾಳಿದ ವಿಶ್ವವು ಕೊನೆಗೆ ಅವನಲ್ಲಿಯೇ ಲಯವಾಗುವುದು. ನಿರ್ಗುಣ ಬ್ರಹ್ಮನು ಏಕಜೀವಾದ್ವಿತೀಯನು. ಅವನು ರೂಪುಗೊಂಡಾಗ ಸಗುಣವೆನಿಸುವನು. ಆಗ ಆತನು ಎಲ್ಲ ಧರ್ಮಗಳು ಮತ್ತು ದರ್ಶನಗಳ ಸಾರರೂಪವೂ ತ್ರಿಮೂರ್ತಿ ತತ್ತ್ವವೂ ಆದ ಮೂಲ ಪ್ರಕೃತಿಯಾಗಿರುವವನು. ಆತನೇ ಬ್ರಹ್ಮ, ವಿಷ್ಣು ಮತ್ತು ಶಿವನೆಂಬ ಮೂರು ತತ್ತ್ವಗಳಿಗೆ ಏಕರೂಪವಾಗಿ ನಿಂತವನು. ಹಾಗೆ ರೂಪು ತಾಳಿ ಜಗತ್ತಿನಲ್ಲಿ ಪ್ರಕಟವಾಗಿರುವವನು. ಆತನು ನಾನಾ ರೂಪ ರೀತಿಗಳಲ್ಲಿ ಬೇರೆ ಬೇರೆ ನೆಲೆಗಳಲ್ಲಿ ರೂಪ ತಾಳಿ ಕೊನೆಗೆ ಜಡರೂಪಿಯಾದ ಭೌತಿಕ ನೆಲೆಯಲ್ಲಿ ಕಾಣಿಸಿಕೊಳ್ಳುವನು. ಹೀಗೆ ದೈವವು ಚೇತನ ಮತ್ತು ಜಡರೂಪಗಳೆರಡರಲ್ಲಿಯೂ ಪ್ರಕಟವಾಗುವುದು. ಇದರಲ್ಲಿ ಯಾವ ಘರ್ಷಣೆಯೂ ಇಲ್ಲ. ಚೇತನಾಚೇತನಗಳು ಒಂದೇ ಸತ್ತ್ವದ ಪ್ರಕಟಣೆ. ಅತ್ಯಂತ ಭೌತಿಕವಾದ ನೆಲೆಯಲ್ಲಿ ಜಡವೇ ಚೇತನವಾಗಿರುತ್ತದೆ.

ದೈವದ ಒಂದು ಅಣುಮಾತ್ರ ಅಂಶವಾದ ಮಾನವನ ಆತ್ಮದಲ್ಲಿ, ಪ್ರಕೃತಿ ಸಹಜವಾಗಿ ಮೂರು ಗುಣಗಳು ಸೇರಿರುತ್ತವೆ. ಆತನು ಸತ್ಯ, ಪ್ರೇಮ ಮತ್ತು ಜ್ಞಾನ ಸ್ವರೂಪಿಯಾಗಿರುತ್ತಾನೆ. ಆತನ ಪ್ರಕೃತಿಯೂ ಸತ್ತ್ವ, ರಜಸ್ ಮತ್ತು ತಮೋಗುಣಗಳೆಂಬ ಮೂರು ಗುಣಗಳಿಂದ ರೂಪಗೊಂಡಿರುತ್ತದೆ. ಅದನ್ನು ಸಾಮರಸ್ಯ, ಕ್ರಿಯಾಶೀಲತೆ ಮತ್ತು ಭೌತಿಕ ಗುಣಗಳೆಂದು ಹೇಳಬಹುದು. ಇವೆರಡೂ ಮೂರು ಗುಣಗಳ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳಿಂದ, ಆತ್ಮನಿಗೆ ಒಂದು ವೈಯಕ್ತಿಕರೂಪ ಅಥವಾ ಹಿರಣ್ಮಯವಾದ ಸ್ವರೂಪ (ಆತನ ಸತ್ಯ ಸ್ವರೂಪ ಆತ್ಮನನ್ನು ಕವುಚಿ ಕೊಂಡಿರುವುದು) ಉಂಟಾಗಿರುತ್ತದೆ. ಆತ್ಮನ ಒಂದು ವೈಯಕ್ತಿಕ ಜೀವನವು ಕಾಲ, ದೇಶ ಮತ್ತು ಕಾರಣ– ಪರಿಣಾಮಗಳಿಂದ ಮಿತಿಗೆ ಒಳಪಟ್ಟು ಇರುತ್ತದೆ. ನಾವು ಅದನ್ನು ಘಟ್ಟಕ್ಕೆ ತಲುಪಿಸುವುದು. ಕರ್ಮಾನುಸಾರವಾಗಿ ಪುನರ್ಜನ್ಮ, ಕಾರಣ ಪರಿಣಾಮಗಳು ಪುನರವತಾರದಲ್ಲಿ ಕಂಡುಬರುವುವು. ಇಂತಹ ಪುನರ್ಜನ್ಮಗಳಿಂದ

ಆತ್ಮನ ಜ್ಞಾನವೇನೂ ಬೆಳೆಯಬೇಕಾಗಿಲ್ಲ. ಅದು ಪರಮಾತ್ಮನ ಅಂಶವಾಗಿರುವುದರಿಂದ ಜ್ಞಾನಾನಂದ ಸ್ವರೂಪಿಯೇ ಹುಟ್ಟು–ಸಾವುಗಳಿಂದ ಅದರಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯು ಪ್ರಕಟವಾಗುತ್ತ ಹೋಗುವುದು.[೬]

ಆತ್ಮನ ಈ ಅನಂತಯಾತ್ರೆಯು ಒಂದು ನಿಲುಗಡೆಗೆ ಬರಬೇಕಾದರೆ, ಜೀವನದ ಇತಿಮಿತಿಗಳನ್ನರಿತ ಯೋಗ ಕುಶಲ ಜೀವನವು ಅದರ ಅರಿವಿನಿಂದ ಉತ್ತೇಜಿತವಾದ ಸಂಯಮವು ಅವಶ್ಯ. ನೀತಿ ನಿಯಮಗಳ ಸುಸ್ಪಷ್ಟ ಅರಿವಿನಿಂದ ನಮ್ಮ ಜೀವನಕ್ಕೆ ನಾವು ಸಂಯಮವನ್ನು ವಿಧಿಸಿಕೊಂಡರೆ ಅದು ಮುಕ್ತಿಗೆ ಸಹಕಾರಿ. ಇದು ವಿಶ್ವಜೀವನಕ್ಕೂ ಮಾನವರ ನೈಜ ಪ್ರಕೃತಿಗೂ ಸಹಕಾರಿಯಾದುದು. ಅದರ ಉದ್ದೇಶ ಮನುಷ್ಯನನ್ನು ನಿರ್ವಿಕಲ್ಪ ಸಮಾಧಿಯ ಕಡೆಗೆ ಒಯ್ಯುವುದು. ಬಾಹ್ಯ ಪ್ರಪಂಚದ ಆಕರ್ಷಣೆಗಳಿಂದ ಚಂಚಲನಾಗದೆ ಆತನು ದೈವದ ಕಡೆಗೆ ಸೆಳೆಯಲ್ಪಟ್ಟು, ಅದಕ್ಕೆ ಸಮೀಪನಾಗುತ್ತಾನೆ. ಅದು ಆತನನ್ನು ಸಮಾಜದ ಹಂಗಿನಿಂದ ಬಿಡುಗಡೆ ಮಾಡುತ್ತದೆ. ಅವನ ಶಾರೀರಿಕ ಬೇಡಿಕೆಗಳನ್ನು ಕ್ರಮಕ್ರಮವಾಗಿ ಇಲ್ಲಗೈಯುತ್ತ, ಕಾಲ ದೇಶಾತೀತನನ್ನಾಗಿ ಮಾಡುತ್ತದೆ. ನೀತಿ–ನಿಯಮಗಳು ಮಾನವ ನಿರ್ಮಿತವಾದವು. ಅದರ ಉದ್ದೇಶ ಮನುಷ್ಯರನ್ನು ಸಮಾಜಕ್ಕೆ ಚೆನ್ನಾಗಿ ಹೊಂದಿಕೊಳ್ಳುವಂತೆ ಮಾಡುವುದು. ಜನರೊಡನೆ ಹೊಂದಿಕೊಂಡು ನಡೆಯುವುದು, ಸಮಷ್ಟಿಯ ಕ್ಷೇಮವನ್ನೇ ಉದ್ದೇಶವಾಗಿ ಉಳ್ಳುದು ನೀತಿ. "ಮನುಷ್ಯನ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುವುದೇ ಅದರ ಉದ್ದೇಶ, ಅಂದರೆ ಮಾನವ ಜೀವನದಲ್ಲಿ ಮಾರ್ಪಾಡನ್ನು ತರುವುದು. ಅವನ ಶರೀರ ಪೋಷಣೆಗೆ ಅವಶ್ಯವಾದ ಪರಿಕರಗಳು ಮತ್ತು ಅವನ ಸುಖಪ್ರವೃತ್ತಿಗೆ ಪೂರಕವಾದ ಸಂದರ್ಭಗಳನ್ನು ಉಂಟುಮಾಡುವುದು ಅದರ ದೃಷ್ಟಿ. ಮಾನವೀಯತೆಯ ಸಹಾನುಭೂತಿಯೂ ಅಲ್ಲಿದ್ದೀತು. ಆದರೆ ವೈಯಕ್ತಿಕವಾದ ನೈತಿಕ ದೃಷ್ಟಿಗೆ ಇವೆಲ್ಲ ಸಂಪೂರ್ಣನಾಗಿ ಹೊರಪಟ್ಟಿವೆ. ಅದು ಅಂತರಂಗದ ಬೆಳಕಾಗಿ ಅವನನ್ನು ನಡೆಸುತ್ತ, ಅವನಲ್ಲಿ ಹುದುಗಿರುವ ದೈವತ್ವವನ್ನು ಬಿಂಬಿಸುತ್ತದೆ. ಮನುಷ್ಯರನ್ನು ವ್ಯಾಪಿಸಿಕೊಂಡಿರುವ ಸಾಮಾಜಿಕ ಸುವ್ಯವಸ್ಥೆಯು ಆತನನ್ನು ಐಹಿಕ ಸುಖಲೋಲುಪತೆಯಿಂದ ಬಿಡಿಸಿ ಇಂದ್ರಿಯಸುಖದ ಸೆಳೆತದಿಂದ ಮೇಲೆತ್ತಿದಂತಿರಬೇಕು. ಅವನೊಳಗೆ ಬೆಳಗುವ ದೇದೀಪ್ಯಮಾನವಾದ ಆತ್ಮದ ಬೆಳಕನ್ನು ತೋರಿಸಿ ಅದರ ಬೆಳಕಿನಲ್ಲಿ ಅವನ ಜೀವನ ಸಾಗುವಂತಿರಬೇಕು. ಯಾವ ಸಮಾಜವು ಅನುಕೂಲಸಿಂಧುವಾಗಿ ಕೂಗಾಡುತ್ತ ಐಹಿಕ ಸುಖಗಳಲ್ಲಿ ಮುಳುಗಿರುವುದೋ ಅದು ವಾತಾವರಣ, ದೇಶಕಾಲಗಳ ಒಡೆತನಕ್ಕೆ ಸಿಲುಕಿ ತಾನು ಸೃಷ್ಟಿಸಿಕೊಂಡ ಸಮೃದ್ಧಿಯಲ್ಲಿ ತಾನೇ ಲಯವಾಗುವುದು.

ವರ್ಣಗಳು

ಮನುಷ್ಯರ ಅಂತರಂಗದಲ್ಲಿ ಹುದುಗಿರುವ ಮೂರು ಗುಣಗಳನ್ನು ಒಪ್ಪುವುದಾದರೆ, ಅದಕ್ಕೆ ಅನುಸಾರವಾಗಿ ಮೂರು ಬಗೆಯ ಜನರು ಸಮಾಜದಲ್ಲಿ ಕಂಡುಬರುತ್ತಾರೆ. ಅರ್ಥಾತ್ ಆಲೋಚನಾಶೀಲರು, ಕ್ರಿಯಾಶೀಲರು ಮತ್ತು ಭಾವನಾಶೀಲರು. ಆದರೆ ನಾಲ್ಕನೆಯ ಒಂದು ಗುಂಪಿದೆ. ಅವರನ್ನು ಗುರುತಿಸಿ ವಿಂಗಡಿಸಿಲ್ಲ. ಮನು ಅವರನ್ನು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರೆಂದು ಕರೆದಿರುವನು. ಇದು ಮನುಷ್ಯರ ಸ್ವಭಾವವನ್ನನುಸರಿಸಿ ಮಾಡಿಕೊಂಡ ವಿಂಗಡಣೆ ಎಂಬುದನ್ನು ನಾವು ಮರೆಯಬಾರದು. ಒಂದೊಂದು ಗುಂಪಿಗೂ ನಿಗದಿಯಾದ ಕೆಲಸ, ಆ ಗುಂಪಿನ ಸದಸ್ಯರು ಕೈಗೊಳ್ಳಬೇಕಾದ ಕರ್ತವ್ಯಗಳು ಮತ್ತು ಸಮಾಜದಲ್ಲಿ ಅವರಿಗೆ ದೊರೆಯಬೇಕಾದ ಗೌರವ ಹಿರಿತನಗಳು ಅವರಿಗೆ ತಕ್ಕಂತೆ ಸಲ್ಲಬೇಕಾದವು. ಬ್ರಾಹ್ಮಣರು ಅಧ್ಯಯನ ಮತ್ತು ಅಧ್ಯಾಪನಗಳಲ್ಲಿ ತೊಡಗಿರಬೇಕು, ಧರ್ಮಕಾರ್ಯಗಳು, ಶ್ರಾದ್ಧಗಳಲ್ಲಿ ಯಜ್ಞ ಯಾಗಾದಿಗಳಲ್ಲಿ ಮಗ್ನರಾಗಿರಬೇಕು ಮತ್ತು ಎಲ್ಲ ಗುಂಪಿನ ಜನರಿಗೆ ನಾನಾ ಸಂದರ್ಭಗಳಲ್ಲಿ ಉಪದೇಶ ಸಲಹೆಗಳನ್ನು ಕೊಡಬೇಕು. ಕ್ಷತ್ರಿಯರು ಶೂರ ಹೋರಾಟಗಾರರು. ಸಮಾಜದೊಳಗಿನ ಜನರನ್ನು (ದುಷ್ಟರನ್ನು) ಅಂಕೆಯಲ್ಲಿಟ್ಟು, ಹೊರಗಿನ ಶತ್ರುಗಳನ್ನು ಅವರಿಂದ ಒದಗುವ ಅಪಾಯವನ್ನು ನಿವಾರಿಸಬೇಕು. ರಾಜ್ಯದ ಆಡಳಿತವನ್ನು ನೋಡಿಕೊಳ್ಳಬೇಕು. ಸಮಾಜದ ಒಳಿತನ್ನು ಅಭಿವೃದ್ಧಿಯನ್ನು ನೋಡಿಕೊಳ್ಳುತ್ತ ಆಡಳಿತಗಾರರನ್ನೂ ಅಂಕೆಯಲ್ಲಿಟ್ಟುಕೊಂಡಿರುತ್ತ, ನ್ಯಾಯಸ್ಥವಾಗಿ ದೃಢಚಿತ್ತದಿಂದ, ದಯಾಶಾಲಿಯಾಗಿ ಸಮಾಜವನ್ನು ಪಾಲಿಸಬೇಕು. ವೈಶ್ಯನು ಹಣವಂತ ಶ್ರೀಮಂತಿಕೆಯನ್ನು ಬೆಳೆಸುವವನು. ಸಮಾಜದ ಜನರ ಅವಶ್ಯಕತೆಗಳನ್ನು ಆತನು ಗಮನಿಸಿ ಅವರ ಬೇಡಿಕೆಗಳ ಪೂರೈಕೆಗೆ ಜವಾಬುದಾರನಾಗಿರಬೇಕು. ನ್ಯಾಯವಾಗಿ ಹಣ ಸಂಪಾದನೆ ಮಾಡುತ್ತ ಅದನ್ನು ಉಚಿತವಾದ ರೀತಿಯಲ್ಲಿ ಹಂಚಿಕೆ ಮಾಡುತ್ತ ಸಮಾಜದ ಆಧಾರಸ್ತಂಭದಂತೆ ಇರತಕ್ಕವನು. ಶೂದ್ರರು ತಮ್ಮಲ್ಲಿರುವ ಶಕ್ತಿ ಸಾಮರ್ಥ್ಯಗಳನ್ನು ಅರಿಯುವ ಪ್ರಯತ್ನ ಮಾಡುತ್ತ, ಇತರ ಗುಂಪುಗಳ ಸೇವೆಯಲ್ಲಿ ನಿರತನಾಗಿರುವರು. ಅವರೊಡನಾಟದಲ್ಲಿ ಹೆಚ್ಚಿನ ಸಂಸ್ಕೃತಿ ಮತ್ತು ವಿದ್ಯೆಗಳನ್ನು ಕಲಿಯಬಹುದು. ಅವರನ್ನು ಅನುಕರಿಸುತ್ತ ಅಥವಾ ಅವರ ಉಪದೇಶಗಳನ್ನು ಗ್ರಹಿಸಿ ಬೆಳೆಯಬಲ್ಲವನು.

ಹೀಗೆ ಮನುವು ಸಮಾಜದಲ್ಲಿ ವಾಸಿಸುವ ಜನರನ್ನು ಅವರ ಸ್ವಭಾವ ಮತ್ತು ಶಕ್ತ್ಯನುಸಾರವಾಗಿ ವಿಂಗಡಿಸಿ ಅವರಿಗೆ, ಬೌದ್ಧಿಕ ಮತ್ತು ಐಹಿಕ ಸಿದ್ಧತೆಗಳು ಲಭಿಸುವಂತೆ ರೂಪಿಸಿ, ಸಮಾಜವು ಸರ್ವತೋಮುಖವಾಗಿ ಅಭಿವೃದ್ಧಿಯಾಗುವಂತೆ, ಹೊಂದಿ ನಡೆಯುವಂತೆ ಏರ್ಪಡಿಸುವಲ್ಲಿ ಬಲವತ್ತರವಾದ ಪ್ರಯತ್ನ ಕೈಗೊಂಡದ್ದನ್ನು ಕಾಣುತ್ತೇವೆ. ಅವನು ವಿಭಾಗ ಮಾಡಿಕೊಟ್ಟ ರೀತಿಗೆ ಶ್ಲಾಘನೆ ಸಲ್ಲತಕ್ಕದ್ದು. ಬ್ರಾಹ್ಮಣನು

ತನ್ನ ವಿಚಾರಸ್ವಾತಂತ್ರ್ಯ ಮತ್ತು ಸ್ವತಂತ್ರ ಜೀವನವನ್ನುಳಿಸಿಕೊಳ್ಳಬೇಕಾದರೆ, ಸಮಾಜದ ಯಾವ ಸೇವೆಗೂ ಅವನು ಬದ್ಧನಾಗಿರಬಾರದು, ಅವರಿಂದ ವೇತನವನ್ನೂ ಪಡೆಯತಕ್ಕದ್ದಲ್ಲ. ಆತನ ಜೀವನಾವಶ್ಯಕತೆಗಳು ಅತ್ಯಂತ ಮಿತವಾಗಿರತಕ್ಕದ್ದು. ಜನರು ಅವನ್ನು ಸ್ವ–ಸಂತೋಷದಿಂದ ಸಮರ್ಪಿಸತಕ್ಕುದು. ಎಲ್ಲರಿಂದ ಅವನಿಗೆ ಸಲ್ಲುವ ಪೂಜ್ಯತೆಯೇ ಅವನಿಗೆ ತಕ್ಕ ಪ್ರತಿಫಲ.

ಕ್ಷತ್ರಿಯನಿಗೆ ಬೇಕಾದಷ್ಟು ಅಧಿಕಾರವಿದ್ದರೂ ಹಣ ಸಂಪಾದನೆಗಾಗಲಿ ಅದರ ವಿತರಣೆಗಾಗಲಿ ಅವನಿಗೆ ಅಧಿಕಾರವಿಲ್ಲ. ಯಾವಾಗ ಅಧಿಕಾರದೊಡನೆ ಹಣವು ಸೇರುವುದೋ ಆಗ ನಿರಂಕುಶ ಕ್ರೌರ್ಯವು ಉಂಟಾಗುವುದು. ಆಗ ಅಧಿಕಾರಸ್ಥರಿಗೆ ಹಣವು ಬೇಕಾದರೆ, ಮೂರನೆಯ ಗುಂಪಾದ ವೈಶ್ಯರಿಂದ ಬರಬೇಕು. ಇವೆರಡೂ ಗುಂಪುಗಳು, ಒಂದರ ಬಳಿಯಲ್ಲಿ ಅಧಿಕಾರ, ಇನ್ನೊಂದರ ಬಳಿಯಲ್ಲಿ ಹಣದ ಥೈಲಿ ಇರುವಾಗ, ಇವರಿಬ್ಬರೂ ಒಟ್ಟಾಗಿ ಸಾಮಾನ್ಯ ಮನುಷ್ಯನ ಸೇವೆ ಮಾಡಬೇಕು. ಅದು ಲೋಕ ಸಂಗ್ರಹ ಕಾರ್ಯವೆನಿಸುತ್ತದೆ. ಅಂದರೆ ಸಾಮಾನ್ಯ ಜನರ ಅಭಿವೃದ್ಧಿ. ಕೊನೆಗೆ ಶೂದ್ರರ ಗುಂಪು ಎಲ್ಲರ ಸೇವೆಯನ್ನು ಕೈಗೊಳ್ಳತಕ್ಕದ್ದು. ಆತನು ತನಗಿಂತ ಮೇಲಿನ ಮೂರು ಗುಂಪುಗಳ ಮಾರ್ಗದರ್ಶನ ಪಡೆಯಬಹುದೇ ವಿನಃ ತಾನು ಕಾನೂನನ್ನು ಕೈಗೆತ್ತಿಕೊಳ್ಳತಕ್ಕದ್ದಲ್ಲ. ಸಹಭಾಗಿತ್ವ, ಸದಸ್ಯರಿಗೆ ಸಹಾಯ ಮತ್ತು ಪರಸ್ಪರರನ್ನು ಆಶ್ರಯಿಸಿ ಬಾಳುವುದು ಜೀವನದ ನಿಯಮ. ಜಾಗರೂಕ ಮನಸ್ಕರೆಲ್ಲರ ನಡವಳಿಕೆಯೂ ಹೀಗೇ ಅಲ್ಲವೇ, ಇರುವುದು. ಘರ್ಷಣೆ ಮತ್ತು ಪೈಪೋಟಿಗಳು ಕಾಡಿನ ನಡವಳಿಕೆ ಮೀನುಗಳ ತರ್ಕವಿಚಾರ. ಇವೆಲ್ಲ ಕೀಳು ಮನಸ್ಕರ ಲಕ್ಷಣ. ಈ ನಾಲ್ಕು ಗುಂಪುಗಳು ಬ್ರಹ್ಮನ ವದನ, ತೋಳುಗಳು, ಮಂಡಿ ಮತ್ತು ಪಾದಗಳಿಂದ ಬಂದಿವೆ. ಇವರುಗಳ ನಡುವೆ ಒಂದು ಬಗೆಯ ಸಾವಯವ ಸಂಬಂಧ, ಪರಸ್ಪರ ಅವಲಂಬನೆ ಕಂಡುಬರುತ್ತದೆ.

ಆಶ್ರಮಗಳು

ನಾವು ಇದುವರೆಗೆ ವ್ಯಕ್ತಿ ಜೀವನದ ಸಾಮಾಜಿಕ ಮುಖಗಳನ್ನು ಪರಿಶೀಲಿಸಿದೆವು. ಆತನ ವರ್ಣದ ಬಗ್ಗೆ ಅವನು ಧರಿಸುವ ಮಾನಸಿಕ ಸಮವಸ್ತ್ರದ ಬಗೆಗೆ ತಿಳಿದೆವು. ಈಗ ಅವನ ವೈಯಕ್ತಿಕ ಸ್ವರೂಪ ಪರಿಶೀಲನೆ ಮಾಡಬೇಕು. ಇಲ್ಲಿ ಮನು ಜನರ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗಳನ್ನು ಅಲ್ಲಿ ವಿವಿಧ ಘಟ್ಟಗಳಲ್ಲಿ ಹಾಯುವ ಅವರ ಜೀವನವನ್ನು ಕುರಿತು ತಿಳಿಸುತ್ತಾನೆ. ಅಲ್ಲಿ ವಿದ್ಯಾಭ್ಯಾಸದ ಘಟ್ಟ ಒಂದು, ಸಂಸಾರ ಜೀವನದ ಘಟ್ಟ ಇನ್ನೊಂದು, ಅರೆ ವಿಶ್ರಾಂತಿಯ ಜೀವನ ಮೂರನೆಯ ಘಟ್ಟ, ನಾಲ್ಕನೆಯದಾಗಿ ತಾನಾಗಿಯೇ ಸ್ವ–ಇಚ್ಛೆಯಿಂದ ಸ್ವೀಕರಿಸಿದ ಸನ್ಯಾಸದ ಸಾಧನೆ. ಅಲ್ಲಿ ಸಮಾಜದೊಡನೆ ಆತನಿಗೆ ಯಾವ ಸಂಬಂದವೂ ಇಲ್ಲ.

ಮುಕ್ತಿಯೊಂದೇ ಆತನ ಗುರಿ. ಪ್ರಾಪಂಚಿಕವಾದ ಮೃಣ್ಮಯ ಜೀವನಕ್ಕೆ ಇಳಿದ ಮೇಲೆ, (ಪೃಥ್ವೀ ಮಾರ್ಗವೆಂದೂ ಹೇಳಬಹುದು. ಇದೊಂದು ಒಳಮುಖವಾದ ಸುರುಳಿ ಎಂದುಕೊಳ್ಳಬಹುದು) ವ್ಯಕ್ತಿಯು ಜೀವನ ಚಕ್ರದ ಇನ್ನರ್ಧ ಭಾಗವನ್ನು ಕ್ರಮಿಸಬೇಕು. (ಅದನ್ನು ನಿವೃತ್ತಿ ಮಾರ್ಗವೆಂದೂ ವಿಕಾಸ ಪಥದಲ್ಲಿ ಏರುವ ಕ್ರಮವೆಂದೂ ಹೇಳಬಹುದು.) ಹೀಗೆ ಮಾನವ ಜೀವಿತಕ್ಕೆ ಒಂದು ಗುರಿಯನ್ನೂ, ಆಕಾರವನ್ನೂ ಅತನು ಸೂಚಿಸಿದ್ದಾನೆ. ಅಲ್ಲದಿದ್ದರೆ, ನಾನಾ ಬಗೆಯ ವಿರೋಧಗಳಿಂದ ಕೂಡಿದ ಈ ಪ್ರಪಂಚದಲ್ಲಿ ಮಾನವ ಜೀವಿತವು ಅಲೆಮಾರಿಯಂತಾಗುವುದು.

ಜೀವನದಲ್ಲಿ ಸಾಧಿಸಬೇಕಾದ ಈ ಗುರಿಯನ್ನು ಉದ್ದೇಶವಾಗಿಟ್ಟುಕೊಂಡು ಮನುವು ವ್ಯಕ್ತಿಯ ಜೀವನವನ್ನು ಇದಕ್ಕೆ ಪೂರಕವಾಗಿ ರೂಪಿಸಿರುವನು. ಒಬ್ಬ ವಿದ್ಯಾರ್ಥಿ ಅಥವಾ ಬ್ರಹ್ಮಚಾರಿಯಾಗಿ ವಿದ್ಯಾರ್ಜನೆ ಮಾಡಬೇಕು. ಬ್ರಹ್ಮವಿದ್ಯೆಯ ದಾರಿಯನ್ನು ಹಿಡಿಯಬೇಕು. ಯೋಗಾಭ್ಯಾಸದಿಂದ ದೈಹಿಕ ಮತ್ತು ಸಾತ್ವಿಕ ಶಕ್ತಿಗಳನ್ನು ಉಳಿಸಿ ಬೆಳೆಸಿಕೊಳ್ಳಬೇಕು. ನಾನಾ ಶಾಸ್ತ್ರ ವಿನ್ಯಾಸಾಧನೆಗಳಿಂದ ಲೋಕ ಜ್ಞಾನದಿಂದ ಭೂಮಿಯಲ್ಲಿ ಸೃಷ್ಟಿಯಾಗಿರುವ ಸಮಸ್ತ ಜೀವಿಗಳಲ್ಲಿ ಹುದುಗಿರುವ ಏಕಸೂತ್ರತೆಯನ್ನು ತಿಳಿದು, ಕಠಿಣವಾದ ಬ್ರಹ್ಮಚರ್ಯೆಯಲ್ಲಿ, ಜೀವನಾವಶ್ಯಕವಾದ ಆಹಾರ ನಿದ್ರೆಗಳಲ್ಲಿ ಅತ್ಯಂತ ಸರಳವಾದ ಕನಿಷ್ಠವಾದ ಕ್ರಮಗಳನ್ನು ಅನುಸರಿಸಿ, ಗುರುವಿಗೆ ಆಹಾರವನ್ನು ಸಂಗ್ರಹಿಸಿ, ಸೇವೆ, ತ್ಯಾಗ ಮತ್ತು ವ್ಯಾಸಂಗಗಳಲ್ಲಿ ತೊಡಗಿರತಕ್ಕುದು. ಗೃಹಸ್ಥಾಶ್ರಮದಲ್ಲಿ ಆತನು ವಿವಾಹಿತನಾಗಿ, ಸಂಸಾರಜೀವನದಲ್ಲಿ ತೊಡಗಿ ಮಕ್ಕಳನ್ನು ಪಾಲಿಸಿ, ವಿದ್ಯಾಭ್ಯಾಸಗಳನ್ನು ಮಾಡಿಸಿ, ಅತಿಥಿ ಅಭ್ಯಾಗತರನ್ನು ಪೋಷಿಸಿ, ದಾನ ಧರ್ಮಗಳಲ್ಲಿ ನಿರತನಾಗಿ, ಹೋಮ ಹವನ ಕಾರ್ಯಗಳಲ್ಲಿ ಮಗ್ನನಾಗಿ ಹಿಂದೆ ನಮಗೆ ಮಾರ್ಗದರ್ಶಕರಾಗಿ ಬಾಳಿಹೋದ ಮಹಾಚೇತನಗಳಲ್ಲಿ ಕೃತಜ್ಞತೆ ಉಳ್ಳವನಾಗಿರಬೇಕು. ಅವರು ತೋರಿದ ದಾರಿಯಲ್ಲಿ ನಡೆಯತಕ್ಕುದು. ಹೀಗೆ ಗೃಹಸ್ಥಾಶ್ರಮದ ಕರ್ತವ್ಯಗಳನ್ನು ಪಾಲಿಸಿ ಸಮಸಾರದಲ್ಲಿದ್ದು, ಸ್ವಲ್ಪ ಮಟ್ಟಿಗೆ ಸಂಗದೂರನಾಗಿ ವಾನಪ್ರಸ್ಥಾಶ್ರಮವನ್ನು ಕೈಗೊಂಡು ಕಿರಿಯರಿಗೆ ಬಾಳುವೆಯ ನಾನಾ ಸನ್ನಿವೇಶಗಳಲ್ಲಿ ಅವಕಾಶವಿತ್ತು. ಬರಿಯ ಮಾರ್ಗದರ್ಶನ ಮಾಡಬೇಕು, ಸಂಸಾರದೊಳಗಿದ್ದು, ಅಲ್ಲಿ ನೇರವಾಗಿ ವ್ಯವಹರಿಸುವುದನ್ನು ತೊರೆಯಬೇಕು. ಅಲ್ಲದೆ, ಯೋಗಾಭ್ಯಾಸ, ಯಮ ನಿಯಮ ನಿಧಿಧ್ಯಾಸನಗಳಲ್ಲಿ ತೊಡಗಿ, ಆತ್ಮಜ್ಞಾನ ಪಡೆಯುವಲ್ಲಿ ಮನಸ್ಸನ್ನು ತೊಡಗಿಸತಕ್ಕುದು. ಇಲ್ಲಿ ಮನಸ್ಸು ನೆಲೆಸಿದಂತೆಲ್ಲ ಸನ್ಯಾಸಾಶ್ರಮವೆಂಬ ನಾಲ್ಕನೆಯ ಭಾಗಕ್ಕೆ ಆತನು ತಕ್ಕವನಾಗುವನು. ಇಲ್ಲಿ ಆತನು ಆಶಾದೂರನಾಗಿ ಲೌಕಿಕ ಆಕರ್ಷಣೆಗಳಿಂದ ಬಾಧಿತನಾಗದೆ ಇರಬೇಕು. ಲೋಕಾತಿಕ್ರಾಂತನಾದ ಅವನ ಪಯಣಕ್ಕೆ ಇದು ಸುಗಮ ತಳಹದಿ. ಜೀವನ ಪ್ರಾರಂಭಕಾಲದಲ್ಲಿ ಅವನು ಕೈಗೊಂಡ ಬ್ರಹ್ಮಚರ್ಯ ತಪಸ್ಸಾಧನೆ ಇಲ್ಲಿ ಬೆಳೆದು

ಪುಟವಿಟ್ಟ ಚಿನ್ನದಂತೆ ಅವನ ಆತ್ಮಶಕ್ತಿಯನ್ನು ರೂಪಿಸುವುದು. ಹೀಗೆ ಮನುವು ನಾಲ್ಕು ಘಟ್ಟಗಳಲ್ಲಿ ಮಾನವರು ಸಾವಧಾನವಾಗಿ ಸಾಧನೆಯ ಹಾದಿಯನ್ನು ಹಾರುತ್ತ ಹಕ್ಕಿಯಂತೆ ಕ್ರಮಿಸಬೇಕೆಂದು ತಿಳಿಸುವನು.

ಇದು ಮನುವು ಪ್ರತಿಪಾದಿಸಿದ ಪ್ರಸಿದ್ಧವಾದ ವರ್ಣಾಶ್ರಮ ಧರ್ಮ. ಆದರೆ ಪಾಶ್ಚಾತ್ಯ ವ್ಯಾಖ್ಯಾನಕಾರರು ಇದನ್ನು ದುರದೃಷ್ಟವಶಾತ್ ಜಾತಿ ಪದ್ಧತಿ ಎಂದು ಪ್ರತಿಪಾದಿಸಿದರು. ಅವರನ್ನು ಅನುಕರಿಸಿಕೊಂಡೇ ಇದ್ದ ಭಾರತೀಯರೂ ಇದಕ್ಕೆ ತಲೆದೂಗಿಬಿಟ್ಟರು. ಪಾಶ್ಚಾತ್ಯರ ಇತಿಹಾಸ ಮತ್ತು ಆಚರಣೆಗಳಲ್ಲಿ ಜಾತಿ ಪದ್ಧತಿ ಇದೆ. ಮನುವಿನ ಕಲ್ಪನೆ ಮತ್ತು ಭಾವನೆಗಳಲ್ಲಿ ಯಾವುದೇ ನಿರ್ಬಂಧಗಳಿಲ್ಲ. ಮಾನವರ ವ್ಯಕ್ತಿತ್ವಗಳಲ್ಲಿ ಆಗುವ ಪರಿಷ್ಕಾರಗಳು, ಕರ್ಮ ಸಿದ್ಧಾಂತದ ಪ್ರತಿಪಾದನೆ, ಅವತಾರಗಳ ವಿವರಣೆ, ಮಾನವ ಚೇತನದ ಸ್ವಚ್ಛಂಧ ಪ್ರವೃತ್ತಿ, ಗುಣಗಳ ದೃಷ್ಟಿಯಿಮದ ಮಾನವರ ವಿಂಗಡಣೆ ಇವುಗಳಿಂದಲೇ ಮನುವಿನ ವರ್ಣಾಶ್ರಮದ ಪ್ರತಿಪಾದನೆಯಲ್ಲಿ ಅಂತಹ ನಿರ್ಬಂಧಗಳೇನೂ ಇಲ್ಲವೆಂದು ತಿಳಿಯುತ್ತದೆ.

ಸಾಮಾಜಿಕ ಬೆಳವಣಿಗೆ

ಹೀಗೆ ಸಂಯೋಜಿತವಾದ ಸಮಾಜವು ಆಂತರಿಕವಾಗಿಯೂ ತನ್ನ ಗೊತ್ತು ಗುರಿಗಳನ್ನು ತಿಳಿದಿರುತ್ತದೆ ಎಂಬುದು ಮನುವಿನ ಅಭಿಪ್ರಾಯ. ಅದಕ್ಕೆ ವಿಕಾಸ ಮತ್ತು ಅಭಿವೃದ್ಧಿಗಳ ನಡುವಿನ ವ್ಯತ್ಯಾಸ ತಿಳಿದಿದೆ. ವಿಕಾಸ ಎನ್ನುವುದು ವೈಯಕ್ತಿಕವಾಗಲಿ ಒಟ್ಟು ಸಮಾಜದ್ದಾಗಲೀ ಒಂದು ಸಹಜವಾದ ಘಟನೆ. ಅದರ ಉದ್ದೇಶ ಮತ್ತು ಮಾರ್ಗಗಳು ಮನುಷ್ಯ ಪ್ರಯತ್ನದಲ್ಲಿಲ್ಲ. ಆದರೆ ಅಭಿವೃದ್ಧಿಯಾದರೋ ಉದ್ದೇಶಿತ ಮಾರ್ಗದಲ್ಲಿಯೇ ನಡೆಯುವಂತಹುದು. ಅದು ಮನುಷ್ಯ ಜೀವನವನ್ನೇ ಉದ್ದೇಶಿಸಿರುತ್ತ ಪರಿಮಿತವಾದ ವಲಯದಲ್ಲಿ ನಡೆಯುವಂತಹುದು.

ಎರಡನೆಯದಾಗಿ, ವಿಕಾಸದ ಮಾರ್ಗ ನಿಷ್ಪಕ್ಷಪಾತವಾದದ್ದು. ಅದರ ಮಾರ್ಗವು ಗರಗಸದ ಮಾರ್ಗ. ಎಷ್ಟೋ ಗುಂಪುಗಳು ಜನ್ಮ ತಾಳುತ್ತವೆ, ಹಲವು ಶತಮಾನಗಳು ಬದುಕಿ ಲಯವಾಗುತ್ತವೆ. ನಾಗರಿಕತೆಗಳು ರೂಪುಗೊಂಡು ಜಗದ ರಂಗದ ಮೇಲೆ ಮೈದೋರಿ ಅನಂತರ ಇಲ್ಲವಾಗುತ್ತವೆ. ಆದರೆ ಮನುವಿನ ವಿಚಾರ ಸರಣಿಯನ್ನು ಆಧಾರವಾಗಿಟ್ಟುಕೊಂಡ ನಾಗರಿಕತೆಯ ಅಭಿವೃದ್ಧಿಯು ಕಾಲನಿಗೆ ಸವಾಲನ್ನೊಡ್ಡಿ ನಿಂತಿದೆ. ಅದಕ್ಕಿಂತ ಪೂರ್ವದಲ್ಲಿ ಬಾಳಿಹೋದ ಎಷ್ಟೋ ಸಂಸ್ಕೃತಿಗಳು ಪುರಾತತ್ತ್ವ ಶೋಧಕರ ಗುದ್ದಲಿಯ ಸಹಾಯದಿಂದ ಕಾಲನಿರ್ಣಯ ಪಡೆದು ಉಳಿದುಕೊಂಡಿವೆ. ಅಭಿವೃದ್ಧಿ ಎಂದರೆ ಸಮಾಜದಲ್ಲಿ ಬಾಳುತ್ತಿರುವ ಎಲ್ಲ ಜೀವನದ ಒಳಿತನ್ನು ಆಧರಿಸಿ ತೀರ್ಮಾನಿಸುವುದು. ಅಭಿವೃದ್ಧಿ ಎನ್ನುವುದು ಬರಿಯ

ಚಲನೆಯಲ್ಲ, ಅದು ಎಲ್ಲರ ಉತ್ಕರ್ಷ. ಯಾವ ಸಮಾಜಕ್ಕೆ ತನ್ನ ಜೀವಿತೋದ್ದೇಶದ ಸ್ಪಷ್ಟ ತಿಳುವಳಿಕೆ ಇರುವುದೊ, ಅದು ಆ ಗುರಿಯ ಸಾಧನೆಯಲ್ಲಿ ಸ್ಪಷ್ಟ ತಿಳುವಳಿಕೆಯನ್ನು ಪಡೆದಿರುವುದು.

ಮೂರನೆಯದಾಗಿ, ಉದ್ದಿಷ್ಟ ಕಾರ್ಯದಲ್ಲಿ, ಯೋಜನಾಬದ್ಧವಾದ ಹಿಡಿತದಿಂದ ಕೂಡಿದ ಗುರಿಯ ನೇರವಾದ ಕ್ರಮಣೆ(ನಡೆ)ಯಿರಬೇಕು. ಪ್ರಾಣಿಗಳು ತಮ್ಮ ಸಹಜಪ್ರಕೃತಿಗೆ ದಾಸರಾಗಿ ಮನಸೋ ಇಚ್ಛೆ ವರ್ತಿಸುವುವು, ಪರಿಸ್ಥಿತಿಗೆ ಒಳಪಟ್ಟು ಬಾಳುವುವು. ಆದರೆ ಮನುಷ್ಯರು ತಮ್ಮ ಇಷ್ಟವನ್ನು ಯೋಜನಾಬದ್ಧ ಪ್ರಯತ್ನಗಳಿಂದ ಸಾಧಿಸುವರು. ಉತ್ಕರ್ಷಕ್ಕೆ, ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಸಂಪೂರ್ಣ ಕಾರ್ಯಕ್ಷಮತೆ ಇರಬೇಕು.

ನಾವು ಈಗಾಗಲೇ ಸಾಮಾಜಿಕ ಅಭಿವೃದ್ಧಿಯ ಕಾರ್ಯಭಾರದ ಬಗೆಗಳನ್ನು ತಿಳಿದೆವು. ಇವು ಈಗಾಗಲೇ ನಾವು ಚರ್ಚಿಸಿರುವ ವರ್ಣಾಶ್ರಮ ಧರ್ಮದ ವಿವರಗಳು.

ಅವನತಿ

ಸಮಾಜದ ಅವನತಿ ಮತ್ತು ಅವ್ಯವಸ್ಥೆಗಳನ್ನು ಕುರಿತು ಸಹ ಮನುವು ವಿಚಾರ ಮಾಡಿದ್ದಾನೆ. ತನ್ನ ಗ್ರಂಥದಲ್ಲಿ ಅದರ ವಿವರಗಳನ್ನು ಕ್ರಮವಾಗಿ ತಿಳಿಸಿದ್ದಾನೆ. ಈ ಅಪಾಯದ ಸೂಚನೆಗಳು ಕಂಡುಬರುತ್ತಿದ್ದಂತೆಯೇ ಸಮಾಜವು ಅವನತಿಯ ಕಡೆಗೆ ಹೆಜ್ಜೆಯನ್ನಿಡುತ್ತಿದೆ ಎಂಬುದನ್ನು ತಿಳಿಯಬೇಕು.[೭] ಅದಕ್ಕೆ ಬದಲಾಗಿ ಒಂದು ಸಮಾಜವು ತನ್ನ ಪ್ರಾಚೀನ ಸಂಸ್ಕೃತಿಗೆ ಅನುಸಾರವಾಗಿ ನಡೆಯುತ್ತ ಕ್ರಮಬದ್ಧವಾದ, ವ್ಯವಸ್ಥಿತ ಜೀವನದಲ್ಲಿದ್ದರೆ, ವ್ಯಕ್ತಿಯ ಮತ್ತು ಸಮಾಜದ ಜೀವನ ಮನುಧರ್ಮಕ್ಕೆ ಅನುಸಾರವಾಗಿದೆ ಎನ್ನಬಹುದು.

ಪ್ರಧಾನ ಅಂಶಗಳು

ಇವು ಮನುವಿನ ಸಾಮಾಜಿಕ ಚಿಂತನೆಗಳ ಪ್ರಧಾನ ಅಂಶಗಳು. ವೈರಾಗ್ಯ ಪೂರ್ಣವಾದ ಸನ್ಯಾಸ ಜೀವನದ ವ್ಯವಸ್ಥೆ, ವಿಶ್ವದಲ್ಲಿ ಹಾಗೂ ಮಾನವ ಜೀವಿತದಲ್ಲಿ ಆತ್ಮದ ಪಾರಮ್ಯ, ಸಮಾಜಜೀವನದಲ್ಲಿ ಮೌಲ್ಯಗಳಿಗೆ ಮತ್ತು ಗುರಿಗಳಿಗೆ ಇರುವ ಪ್ರಾಮುಖ್ಯ, ಮಾನವರ ಸ್ವಭಾವ ಮತ್ತು ಪ್ರವೃತ್ತಿಗಳಿಗೆ ಅನುಸಾರವಾಗಿ ಸಮಾಜದಲ್ಲಿ ಅವರ ವಿಂಗಡನೆ, ಅಲ್ಲಿ ಮಾನವ ಜೀವನಕ್ಕೆ ಉನ್ನತಿಯ ಅವಕಾಶ ಮತ್ತು ಅವರ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾದ ಸಾಮಾಜಿಕ ಅಭಿವೃದ್ಧಿ ಮತ್ತು ಪರಿಶ್ರಮದ ಫಲದ ಹಂಚಿಕೆ, ಸಾಮಾಜಿಕ ಉನ್ನತಿಯಂತೆಯೇ ಇತರ ಕಾರಣಗಳಿಂದ ಅವನತಿಯ ಸಾಧ್ಯತೆಯನ್ನೂ ಆತನು ಶ್ರುತಪಡಿಸಿದ್ದಾನೆ. ಪ್ರಾಪಂಚಿಕ ಬದುಕು ಚೇತನದಿಂದಾಗಿ

ಅರ್ಥಪೂರ್ಣವೆಂದು ಮನು ಭಾವಿಸುತ್ತಾನೆ. ಅಂತರ್ವಲಿತವೂ, ವಿಕಸನಶೀಲವೂ ಆದ ವಿಶ್ವಸೃಷ್ಟಿಯ ಪ್ರಕ್ರಿಯೆ ಅನುಕೂಲಕರವಾಗಿ ಮಾತಿಗೆ ನಿಲುಕುವುವು. ಜಡ, ಚೇತನ, ಜೀವನ ಮತ್ತು ಮಾನಸಿಕ ಶಕ್ತಿಗಳ ವಿಚಾರದಲ್ಲಿ ಸಾಮಾಜಿಕ ಕ್ಷೇತ್ರವೇ ಪ್ರಧಾನ ವಿಷಯವಾಗಿರುತ್ತದೆ. ಇವುಗಳಲ್ಲಿ ಒಂದನ್ನು ಉಪೇಕ್ಷಿಸಿ ಇನ್ನೊಂದನ್ನು ಎತ್ತಿ ಹಿಡಿಯುವುದರಿಂದ ಯಾವ ಸಾಮಾಜಿಕ ತತ್ತ್ವವೂ ಅಸಂಪೂರ್ಣವಾಗಿರುತ್ತದೆ. ಸಮಾಜವು ಕಂಡುಕೊಂಡಿರುವ ಮೌಲ್ಯಗಳು ಅನುಭವವೇದ್ಯವಾದ ಆಕಸ್ಮಿಕಗಳಲ್ಲ, ಅವು ಸಮಾಜದಲ್ಲಿ ಮನುಷ್ಯರ ಸೃಷ್ಟಿಗಳು. ಸತ್–ಚಿತ್–ಆನಂದಗಳು ಸ್ವಯಂ ಸಿದ್ಧವಾಗಿ, ವೇದ್ಯವಾಗಿಯೇ ಇವೆ. ಮಾನವರು ತಮಗೆ ಪ್ರಕೃತಿದತ್ತವಾದ ಶಕ್ತಿಯಿಂದ, ತಮ್ಮ ದೈಹಿಕ, ಮಾನಸಿಕ ಚೈತನ್ಯ ಮತ್ತು ಸತ್ತ್ವಗಳಲ್ಲಿ ಅಡಗಿರುವ ನೈಜ ಶಕ್ತಿಗಳನ್ನು ಅರಿತು ತಮ್ಮ ಪಾರಮಾರ್ಥಿಕ ನೆಲೆಯ ಕಡೆಗೆ ಹಿಂದಿರುಗುವ ಪ್ರಯಾಣದಲ್ಲಿ ನಿರತರಾಗುವರು.

ಪ್ರಪಂಚದ ಮೇಲೆ ಮನುವಿನ ತತ್ತ್ವಗಳ ಪ್ರಭಾವ

ಭೂಗೋಳದ ಉದ್ದಕ್ಕೂ ಬಹುಪ್ರಾಚೀನ ಕಾಲದಿಂದ ಮಾನವ ಕುಲದ ಮೇಲೆ ಮನುಧರ್ಮ ಶಾಸ್ತ್ರದಂತೆ ಪ್ರಭಾವ ಬೀರಿದ ಗ್ರಂಥ ಇನ್ನೊಂದಿಲ್ಲ. ಆರ್ಯರ ಪಂಗಡಗಳು ತಮ್ಮ ತವರೂರಾದ ಮಧ್ಯ ಏಷ್ಯಾದಿಂದ ಹೊರಟು ಬೇರೆ ಬೇರೆ ಊರುಗಳಲ್ಲಿ ಹರಡಿ ನಾನಾ ದಿಕ್ಕುಗಳಿಗೆ ಚದುರಿ ತಮ್ಮೊಡನೆ ಮನುವಿನ ಉಪದೇಶಗಳನ್ನು ಒಯ್ದಿದ್ದಾರೆ. ಏಷ್ಯಾದ ಪೆಸಿಫಿಕ್ ತೀರದುದ್ದಕ್ಕೂ ಅಲ್ಲಲ್ಲಿ ದೊಡ್ಡ ಗುಂಪುಗಳಲ್ಲಿ ವಾಸಿಸುತ್ತ ಮಧ್ಯ ಏಷ್ಯ ಅಲ್ಲದೆ, ಮಂಗೋಲಿಯ, ಜಪಾನ್, ಫಾರ್ಮೊಸ, ಫಿಲಿಪ್ಪೈನ್ಸ್ ದ್ವೀಪಗಳು, ಪೂರ್ವ ತೀರದ ದ್ವೀಪಸಮೂಹಗಳು ಅದಸಲ್ಲದೆ, ಆಸ್ಟ್ರೇಲಿಯದ ಪೂರ್ವ ತೀರಗಳಲ್ಲಿ ನೆಲೆಸುತ್ತ ನ್ಯೂಜಿಲೆಂಡ್ ದ್ವೀಪದ ಮಾವೊರಿಸ್‌ಗಳಾಗಿರುವುದು ಕಂಡುಬಂದಿದೆ. ಈ ಪ್ರದೇಶಗಳ ಜನರ ಭಾಷೆ, ಧಾರ್ಮಿಕ ಪೂಜಾವಿಧಾನಗಳು, ಪದ್ಧತಿಗಳು ಮತ್ತಿತರ ಕುರುಹುಗಳು ಆರ್ಯ ಜನರ ಪದ್ಧತಿ ನಡವಳಿಕೆಗಳನ್ನು ಹೋಲುತ್ತವೆ. ಮಾವೋರಿಗಳ ಪುರಾಣಗಳಲ್ಲಿ 'ಮನು' ಎಂಬ ಶಬ್ದವೂ ಕೂಡ ಕಂಡುಬರುತ್ತದೆ.

ಮನುವಿನ ಪ್ರಭಾವವು ಈ ಜನರ ಮೇಲೂ ಇತರ ಜನಾಂಗಗಳಲ್ಲಿಯೂ ಹೇರಳವಾಗಿ, ಸ್ಫುಟವಾಗಿ ಕಂಡುಬರುತ್ತದೆ. ಅವರ ಸಾಮಾಜಿಕ ಪದ್ಧತಿಗಳು, ಸಾಮಾಜಿಕ ವ್ಯವಸ್ಥೆ, ಕಾನೂನು ಇತ್ಯಾದಿಗಳು 'ಮನು'ನಿರ್ಮಿತವಾದುವೇ ಆಗಿವೆ. ಇಂಡೋಚೈನಾ, ವಿಯಟ್‌ನಾಂ, ಇಂಡೋನೇಶಿಯ, ಬಾಲಿ, ಮಲಯೇಶಿಯ, ಥಾಯ್ ಮತ್ತು ಬರ್ಮಾಗಳಲ್ಲಿ ಮನುವಿನ ಉಪದೇಶಗಳನ್ನು ಶಾಶ್ವತವಾಗಿ ಉಳಿಸಿಕೊಂಡಿದ್ದಾರೆ. ಉದಾಹರಣೆಗೆ ಇಂಡೋನೇಷ್ಯದ ಗ್ರಂಥ 'ಕುತ್ರಮಾನವ'

(Kutra manava)ದ ಒಂಬತ್ತು ಭಾಗಗಳು ಮನುವನ್ನು ಆಧಾರವಾಗಿ ಹೊಂದಿವೆ.[೮] ಈ ದೇಶದ ಸಾಮಾಜಿಕ ವರ್ಣಗಳು, ವ್ಯವಸ್ಥೆಗಳು, ಅವುಗಳ ಕಾನೂನು, ಸಾಹಿತ್ಯಗಳೆಲ್ಲವೂ ಮನುವಿನ ಉಪದೇಶಗಳಿಗೆ ಸಾಕ್ಷಿಯಾಗಿವೆ.

ಭಾರತದಲ್ಲಿ ಮನುವಿನ ಉಪದೇಶಗಳು ಮನೆಮಾತಾಗಿವೆ. ನಮ್ಮ ಜನರ ಜೀವನ ಚಿಂತನೆಗಳ ಮೇಲೆ ಎಷ್ಟೋ ಪ್ರಾಚೀನ ಕಾಲದಿಂದ ಆತನ ವಿಚಾರಗಳ ಪ್ರಭಾವವಿದೆ. ಆತನು ಪ್ರತಿಪಾದಿಸಿರುವ ವರ್ಣಾಶ್ರಮ ಧರ್ಮಗಳು ಕಾಲನ ಪ್ರಭಾವದಿಂದ ಮುದಿಯಾಗಿ, ನ್ಯಾಯವಿಹಿತವಾಗಿ, ಅನಂತರ ಜಾತೀಯತೆ ಎಂಬ ಹೆಸರನ್ನು ತಾಳಿದೆ. ಆದರೆ ದೇಶದ ಕಾನೂನಿಗೆ ಒಳಪಟ್ಟು ಈ ಆಶ್ರಮಗಳು ಮನುವನ್ನು ಅನುಸರಿಸಿಕೊಂಡಿವೆ.

ಭಾರತದ ವೈವಸ್ವತ ಮನುವು ಪ್ರಾಚೀನ ಇರಾನಿನಲ್ಲಿ ಮನು ವೈವಹಂತನೆಂದು ಕರೆಸಿಕೊಂಡಿದ್ದಾನೆ. ಮನುಷ್ಯರ ಸ್ವಭಾವಾನುಸಾರಿಯಾದ ನಾಲ್ಕು ಬಗೆಯ ವಿಂಗಡಣೆಯೂ, ಅದರ ಮೂಲ ಮತ್ತು ಕರ್ತವ್ಯಗಳು ಮನುಧರ್ಮಶಾಸ್ತ್ರವನ್ನು ಅನುಸರಿಸಿದೆ.

ಸುಮೇರಿಯನ್ ನಾಗರಿಕತೆಯನ್ನು ಕುರಿತು ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಅಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವು ಮನುಧರ್ಮ ಶಾಸ್ತ್ರಕ್ಕೆ ಅನುಸಾರವಾಗಿಯೇ ಇರುವುದು ಕಂಡುಬಂದಿದೆ. ನ್ಯಾಯತೀರ್ಮಾನವೂ ಭಾರತ ಮತ್ತು ಸುಮೇರಿಯಗಳಲ್ಲಿ ಏಕರೂಪವಾಗಿರುವುದು ಕಂಡುಬಂದಿದೆ 'ಮೆ' (Me) ಎಂಬುದು ಕಾನೂನನ್ನು ಸೂಚಿಸುವ ಪದ.

ಬ್ಯಾಬಿಲಾನ್ ಮತ್ತು ಅಸ್ಸೀರಿಯಗಳಲ್ಲಿ ಮನುವಿನ ಉಪದೇಶಗಳು ಜನಜನಿತವಾಗಿವೆ. ಅಸ್ಸುರಬನಿಪಾಲ್‌ನ ಪುಸ್ತಕಭಂಡಾರದಲ್ಲಿ ಆತನ ವಂಶದ ಇತರರನ್ನೂ ಕುರಿತು ಹೇಳಿದೆ. ಸುಮೇರಿಯದ ಲಿಪಿಟ ಇಷ್ಟಾರನ ನಿಯಮಗಳು ಮತ್ತು ಅಸ್ಸೀರಿಯದ 'ಹಮ್ಮುರಬಿ'ಯಲ್ಲಿರುವ ವಿಷಯಗಳನ್ನು ಮನುವಿನ ಪ್ರತಿಪಾದನೆಗಳೊಡನೆ ಹೋಲಿಸಿ ನೋಡಿದಾಗ ಇನ್ನೂ ಹೆಚ್ಚಿನ ಕುತೂಹಲದಾಯಕ ಸಂಗತಿಗಳು ಗೋಚರವಾಗಬಹುದು.

ಈಜಿಪ್ಟಿನ ಉತ್ತರ ದಕ್ಷಿಣಭಾಗಗಳನ್ನು ಒಂದುಗೂಡಿಸಿದ ಸುಪ್ರಸಿದ್ಧ ಚಕ್ರವರ್ತಿ ಮಿನೀಸನು ತಾನು ಮನುವಿನ ವಂಶದವನೆಂದು ಹೇಳಿಕೊಂಡಿದ್ದಾನೆ. ಪುರಾತನ 'ಕ್ರೀಟ್ (Crete) ದೇಶದ ಅರಸನೂ, ಕಾನೂನುರೂಪಿಸಿದವನೂ ಮಿನೋಸ್ ಎಂಬವನು. ಹೀಬ್ರೂಗಳ ಪ್ರವಾದಿಯಾದ ಮೋಸೆಸನೂ, ಅವರಿಗೆ ನೀತಿ ನಿಯಮಗಳನ್ನು ನಿರೂಪಿಸಿಕೊಟ್ಟವನು. ಇವರೆಲ್ಲರ ಸಾಮಾಜಿಕ ವಿಚಾರಗಳು ಜೀವನಪದ್ಧತಿಗಳ ನಿರೂಪಣೆ ಮನುವಿನ ಮಾರ್ಗವನ್ನು ಬಹಳ ಮಟ್ಟಿಗೆ ಹೋಲುತ್ತದೆ. ಸಾವಿರದ ಏಳುನೂರ ತೊಂಬತ್ತರಲ್ಲಿ ಮನುಧರ್ಮ ಶಾಸ್ತ್ರವನ್ನು ಇಂಗ್ಲಿಷ್ ಭಾಷೆಗೆ

ಅನುವಾದಿಸಿದ ಸರ್ ವಿಲಿಯಂ ಜೋನ್ಸ್ ಎಂಬಾತನು ಮಿನೀಸ್, ಮಿನೋಸ್ ಮತ್ತು ಮೋಸೆಸ್ ಎಂಬ ಪದಗಳ ಹೋಲಿಕೆಯನ್ನು ಮತ್ತು ಅವರೆಲ್ಲರೂ ಕಾನೂನು ಪ್ರವರ್ತಕರೆಂಬ ವಿಚಾರವನ್ನು ಗಮನಾರ್ಹವಾದ ಸಂಗತಿಗಳೆಂದು ತಿಳಿಸಿ, ಅವರೆಲ್ಲರೂ ಯಾವುದೋ ಒಂದು ಮೂಲದಿಂದ ಸ್ಫೂರ್ತಿಯನ್ನು ಪಡೆದಿರಬಹುದು, ಅದು ಬಹುಶಃ ಭಾರತದ ಮನುಧರ್ಮಶಾಸ್ತ್ರವೇ ಇರಬಹುದು ಎಂದಿದ್ದಾನೆ.

ಆರ್ಯರ ಪಂಗಡಗಳು ಮಧ್ಯ ಏಷ್ಯದಿಂದ ಯೂರೋಪಿನ ವಿವಿಧ ಭಾಗಗಳಿಗೆ ವ್ಯಾಪಾರ, ವ್ಯವಹಾರಗಳಿಗಾಗಿ ಸಾಂಸ್ಕೃತಿಕ ಸಂಬಂಧಗಳಿಗಾಗಿಯೋ ತಮ್ಮ ಪೂರ್ವಿಕರು ನೆಲೆಸಿರುವ ನಾಡಾದ ಭಾರತಕ್ಕೆ ಆಗಾಗ್ಗೆ ಸಂಚಾರ ಮಾಡುತ್ತಿದ್ದರು. ವೇದಗಳಲ್ಲಿ ಉಕ್ತನಾದ ಮಿತ್ರ(ಸೂರ್ಯ)ನನ್ನು ದೈವವಾಗಿವುಳ್ಳ ಧರ್ಮವು ಅಲ್ಲಿನ ಆರ್ಯರ ಕುಲಗಳಲ್ಲಿ ವ್ಯಾಪಿಸಿದ್ದಿತು. ಅಲ್ಲಲ್ಲಿ ಹಿಟೈಟ್ ಮತ್ತು ಮೀವಾನಿಗಳೆಂಬ ಆರ್ಯ ಧರ್ಮಗಳೂ ಪ್ರಚಲಿತವಾಗಿದ್ದವು. ಭಾರತದಲ್ಲಿ ವ್ಯಾಪಕವಾಗಿದ್ದ ಆರ್ಯರ ಬಹುಮುಖವಾಗಿದ್ದ ಸಂಸ್ಕೃತಿಯು, ಈ ವೇಳೆಗಾಗಲೇ ವಲಸೆ ಹೋಗಿ ನೆಲೆಸಿದ್ದ ಯೂರೋಪಿನ ಆರ್ಯರಲ್ಲಿ ಅನುಮೋದಿತವಾಗಿದ್ದಿತು.

ಮಾನವಕುಲದ ಮೂಲಪುರುಷನೆಂದು ಕರೆಸಿಕೊಂಡಿರುವ ಮನುವು ಹಾಕಿಕೊಟ್ಟ ಸಂಪ್ರದಾಯ ಮತ್ತು ತಳಹದಿಗಳು ತಮ್ಮ ಮೂಲನೆಲೆಯಿಮದ ಎಲ್ಲ ಕಡೆಗೂ ಹರಡಿ ಪುನಃ ಪುನಃ ಸಂಚಾರ ಕೊಳುಕೊಡೆಗಳಿಂದ ಭದ್ರಮಾಡಲ್ಪಟ್ಟವು. ಪ್ರಾಚೀನ ಗ್ರೀಕರಲ್ಲಿ ಆತನು ಮಿನೇಸ್ ಎಂದು ಕರೆಸಿಕೊಂಡನು. ಪ್ಲೇಟೋವಿನ ರಿಪಬ್ಲಿಕ್ ಗ್ರಂಥದಲ್ಲಿ ಮನುವಿನ ನಿಯಮ ಪ್ರತಿಪಾದನೆಗಳ ತಳಹದಿ ಕಂಡುಬರುತ್ತದೆ.[೯] ಮನುವಿನ ಹೆಸರನ್ನು ಮುಂದೆ ಉಳಿಸಿದವರು ಜರ್ಮನಿಯಲ್ಲಿ ಪಂಗಡವಾಗಿ ಬಾಳುತ್ತಿದ್ದಂತಹ ಜನರು. ಅವರು ತಮ್ಮ ಕುಲದ ಮೂಲಪುರುಷನು ಮನುವೆಂದು ಹೇಳಿಕೊಂಡಿದ್ದಾರೆ. ಇದು ಕ್ರಿ.ಶ. ೭೮ರಲ್ಲಿ ಜರ್ಮೇನಿಯ ಎಂಬ ಗ್ರಂಥವನ್ನು ರಚಿಸಿದ ಟ್ಯಾಸಿಟಸ್ ಎಂಬ ಪ್ರಾಚೀನ ರೋಮಿನ ಇತಿಹಾಸಜ್ಞನ ಕೃತಿಯಲ್ಲಿದೆ. ಗ್ರೀಸ್ ತನ್ನ ಪೂರ್ವಿಕರಂತೆಯೇ ವಿಜ್ಞಾನ ಮತ್ತು ಮಾನವಶಾಸ್ತ್ರಗಳ ವಿಚಾರದಲ್ಲಿ ಭಾರತಕ್ಕೆ ಕೃತಜ್ಞವಾಗಿದೆ.[೧೦] ರೋಮನ್ ಸಾಮ್ರಾಜ್ಯವು ಗ್ರೀಕರ ನಾಗರಿಕತೆಯನ್ನೂ ಮನುವಿನ ಉಪದೇಶಗಳ ಸಾರವನ್ನೂ ಗ್ರಹಿಸಿಕೊಂಡುದು ಏಕೆಂದರೆ ಜಸ್ಟಿನಿಯನ್ನನ ಕಾನೂನುಗಳನ್ನು ಕ್ರೋಡೀಕರಿಸಲು ಅದರ ಮೂಲಕ ಸಹಾಯವಾಯಿತು. ಎಚ್.ಜಿ.ವೆಲ್ಸ್ ಮತ್ತು ಸರ್. ಪಾಲ್ ವಿನೋಗ್ರಡಾಫ್ ಎಂಬ ಲಂಡನ್ ವಿಶ್ವವಿದ್ಯಾಲಯದ ನ್ಯಾಯದರ್ಶನ ಶಾಸ್ತ್ರಜ್ಞರು ಅಭಿಪ್ರಾಯಪಡುವುದೇನೆಂದರೆ, ರೋಮನ್ ನ್ಯಾಯದರ್ಶನ ಶಾಸ್ತ್ರವು ತನ್ನ ಆಂತರ್ಯ ಮತ್ತು ಅಕ್ಷರಶಃ ಪೌರ್ವಾತ್ಯರ ಪ್ರಭಾವದಿಂದ ಕೂಡಿದೆ. ಯೂರೋಪಿನ ಉದ್ದಗಲಕ್ಕೂ ಕ್ರಿಸ್ತಧರ್ಮ ವ್ಯಾಪಿಸುವ ಮೊದಲು 'ಮಿತ್ರ'ನ ಆರಾಧನೆ ಪ್ರಚಲಿತವಾಗಿದ್ದಿತು.

ಭಾರತ ಮತ್ತು ರೋಮ್ ದೇಶಗಳು ಕ್ರಿಸ್ತಧರ್ಮ ವ್ಯಾಪಿಸುವ ಮೊದಲು ಪರಸ್ಪರರ ರಾಯಭಾರಿಗಳನ್ನು ಹೊಂದಿದ್ದರು. ಭಾರತದ ಸಂಬಾರ ಪದಾರ್ಥಗಳು, ಸುಗಂಧ ದ್ರವ್ಯಗಳೂ, ವಸ್ತ್ರಗಳೂ ಹೇರಳವಾಗಿ ರೋಮ್ ಚಕ್ರಾಧಿಪತ್ಯಕ್ಕೆ ಬಳಕೆಯಾಗುತ್ತಿದ್ದವು. ಹಾಗಾಗಿ ಹಿಂದೂಗಳ ಮನುಧರ್ಮಶಾಸ್ತ್ರದ ಗಾಢವಾದ ಪ್ರಭಾವಕ್ಕೆ ರೋಮ್ ಸಾಮ್ರಾಜ್ಯದ ಕಾನೂನು ಒಳಪಡುವುದರಲ್ಲಿ ಆಶ್ಚರ್ಯವಿಲ್ಲ.

ಕ್ರಿ.ಶ. ಆರನೆಯ ಶತಮಾನದಲ್ಲಿ ಜಸ್ಟಿನಿಯನ್ನರ ಕಾನೂನಿನ ಮೇಲೆ ಮನುವಿನ ವಿಚಾರಗಳ ಪ್ರಭಾವವಾದುದಷ್ಟೇ ಅಲ್ಲ, ಅಲ್ಲಿನ ಪ್ರಯಾಣಿಕರು ಭಾರತಕ್ಕೆ ಬರುವುದೂ ಹೋಗುವುದು ಯಥೇಚ್ಚವಾಗಿ ನಡೆದಿದ್ದಿತು. ಕೆಲವು ಭಾರತದ ಗ್ರಂಥಗಳು ಯೂರೋಪಿನ ಭಾಷೆಗಳಿಗೆ ತರ್ಜುಮೆಯಾದವು. ಭಾರತದ ಸಾಮಗ್ರಿಗಳೆಷ್ಟೋ ಯೂರೋಪಿನ ಮಾರುಕಟ್ಟೆಗಳಲ್ಲಿ ಬಿಕರಿಯಾಗುತ್ತಿದ್ದವು. ಇಸ್ಲಾಂ ದೇಶವು ಭಾರತಕ್ಕೂ ಪಶ್ಚಿಮ ದೇಶಗಳಿಗೂ ನಡುವಿನ ಸೇತುವೆಯ ಕಾರ್ಯ ನಿರ್ವಹಿಸುತ್ತಿದ್ದಿತು. ಇಸ್ಲಾ ದೇಶವು ಭಾರತದಿಂದ ತಾನು ಗ್ರಹಿಸಿಕೊಂಡುದನ್ನು ಗ್ರೀಕ್, ಯುನಾನ್ ಮುಂತಾದ ದೇಶಗಳ ಸಂಸ್ಕೃತಿಯೊಡನೆ ಮೇಳೈಸಿ, ಯೂರೋಪ್ ಮತ್ತು ಏಷ್ಯಾದ ಜನರ ಸಂಸ್ಕೃತಿಯೊಡನೆ ಬೆರೆಸಿ ಬೆಳೆಸಿಕೊಳ್ಳುವ ಕೇಂದ್ರಬಿಂದುವಾಯಿತು. ಯೂರೋಪವು ಭಾರತದ ಸಂಸ್ಕೃತಿ ಮತ್ತು ವ್ಯಾಪಾರ ಸಾಮಗ್ರಿಗಳಿಗೆ ಮಾರುಕಟ್ಟೆಯಾಗಿ ಪರಿಣಮಿಸಿದ್ದರಿಂದ ಭಾರತದೊಡನೆ ವ್ಯಾಪಾರ ವಹಿವಾಟುಗಳಿಗೆ ನೂತನವಾಗಿ ಸಮುದ್ರ ಮಾರ್ಗವನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಾವಿಕರು ಅರಸುತ್ತಲೇ ಇದ್ದರು. ಕೊಲಂಬಸನು ಭಾರತಕ್ಕೆ ಮಾರ್ಗವನ್ನು ಅರಸುತ್ತ ಅಮೆರಿಕಕ್ಕೆ ಮುಟ್ಟಿದುದು ತಿಳಿದೇ ಇದೆಯಲ್ಲ. ಹತ್ತು ಹನ್ನೆರಡನೆಯ ಶತಮಾನಗಳಲ್ಲಿ ಯೂರೋಪದ ಜನರ ಚಿಂತನೆ ಆಲೋಚನೆಗಳ ಮೇಲೆ ಮನುವಿನ ಧರ್ಮಶಾಸ್ತ್ರದ ಪ್ರಭಾವವನ್ನು ಪುನರವಲೋಕನ ಮಾಡಿ ಕಂಡುಕೊಳ್ಳಬಹುದು.

ಕ್ರಿ.ಶ. ೧೮೮೪ ವರ್ಷದ ಈ ಸುಮಾರಿನಲ್ಲಿ ಯೂರೋಪಿನಲ್ಲಿ ಹುಟ್ಟಿಕೊಂಡ ರೋಮಾಂಟಿಸ್ಟರ ಪಂಥ(ಭಾವನಾಸ್ವಾತಂತ್ರ್ಯ ಪಂಥ)ದ ಕಾಲಕ್ಕೆ ನಮಗೆ ಇನ್ನೂ ಗಟ್ಟಿಯಾದ ಆಧಾರಗಳು ಸಿಗುತ್ತವೆ. ಯೂರೋಪದ ಆಲೋಚನಾಶೀಲರ ಪಾಲಿಗೆ ಬಂದು ಹೋದ ಪ್ರಪಂಚನೇ ಒಡಮೂಡಿತೇಕೆಂದರೆ ಭಾರತದ ಸಂಸ್ಕೃತ ಗ್ರಂಥಗಳು ಯೂರೋಪಿನ ಪ್ರಮುಖವಾದ ಭಾಷೆಗಳಿಗೆ, ಅದರಲ್ಲಿಯೂ ಇಂಗ್ಲಿಷ್, ಜರ್ಮನ್ ಮತ್ತು ಫ್ರೆಂಚ್ ಭಾಷೆಗಳಿಗೆ ಅನುವಾದಗೊಂಡ ಸಂದರ್ಭವಾಗಿತ್ತು ಅದು. ೧೭೯೦ರಲ್ಲಿ ಸರ್ ವಿಲಿಯಂ ಜೋನ್ಸ್ ಅವರು ಅನುವಾದಿಸಿ ಪ್ರಕಟಿಸಿದ ಮನುಧರ್ಮ ಶಾಸ್ತ್ರ ಅಂತಹ ಗ್ರಂಥಗಳ ವ್ಯಾಸಂಗಕ್ಕೆ ವಿಶೇಷ ಉರವಣೆಯನ್ನುಂಟುಮಾಡಿತು.

ಅದರಿಂದ ಆ ದೇಶ ರೊಮ್ಯಾಂಟಿಕ್ ಪಂಥದ ಮುಂದಾಳುಗಳು ಭಾರತದ ವಿಚಾರ ಆಲೋಚನೆಗಳಿಗೆ ಹೆಚ್ಚಿನ ಗಮನವಿತ್ತರು.[೧೨]

ಮೊದಲು ಬ್ರಿಟಿಷ್ ವಿದ್ವಾಂಸರು ಸಹಜವಾಗಿಯೇ ಮನುವಿನ ವಿಚಾರಗಳ ಹಿಡಿತಕ್ಕೆ ಒಳಗಾದರು. ಕಾರ್ಲೈಲ್, ಕೋಲರಿಡ್ಜ್, ಮತ್ತು ಇನ್ನೂ ಇತರ ಕವಿಗಳಾದ ಶೆಲ್ಲಿ, ಕೀಟ್ಸ್, ಬೈರನ್, ಈತನ ವಿಚಾರಗಳನ್ನು ತಿಳಿದು ಆತನ ಪ್ರಭಾವಕ್ಕೆ ಒಳಪಟ್ಟರು. ಎಡ್ಮಂಡ್ ಬರ್ಕೆಯವನಂತೂ ಭಾರತದ ಚಿಂತನೆಗಳು, ಜೀವನ ಮುಂತಾದವುಗಳಿಂದ ಪ್ರಭಾವಿತನಾದನು ಮತ್ತು ತುಂಬ ಆಕರ್ಷಿತನಾದನು. 'ಸದೆ' ಈ ಗ್ರಂಥವನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಅಲ್ಲಲ್ಲಿ ಗುರುತು ಮಾಡಿರುವ 'ಪ್ರತಿ'ಯೊಂದು ಆತನ ಪುಸ್ತಕ ಭಂಡಾರದಲ್ಲಿ ದೊರೆತಿದೆ. ಇಂಗ್ಲಿಷ್ ಮತ್ತು ಸ್ಕಾಟ್ಲೆಂಡಿನ ಸಾಮಾಜಿಕ ಚಿಂತಕರನ್ನು ವಿವರವಾಗಿ ಸಂಶೋಧನೆ ಮಾಡಿದರೆ ಇನ್ನೂ ಕುತೂಹಲಕರವೂ ಆಸಕ್ತಿಯುತವೂ ಆದ ಸಂಗತಿಗಳು ತಿಳಿದುಬರುತ್ತವೆ.

ಜರ್ಮನಿಯ ರೊಮ್ಯಾಂಟಿಕ್ ಚಿಂತಕರಲ್ಲಿ ಪ್ರಮುಖರಾದ ಹೆಗೆಲ್, ಶ್ಲೆಲೆಲ್ ಅವರುಗಳು ಮನುಧರ್ಮಶಾಸ್ತ್ರವನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಿ ವಿಶ್ವವಿದ್ಯಾನಿಲಯಗಳಲ್ಲಿ ಭಾಷಣ ಮಾಡಿದರು. 'ಮಾರ್ಕ್ಸ್'ನು ಈ ಗ್ರಂಥವನ್ನು ಚೆನ್ನಾಗಿ ವ್ಯಾಸಂಗ ಮಾಡಿದ್ದರೂ ಅಲ್ಲಿನ ವಿಚಾರಗಳಿಗೆ ವಿರುದ್ಧವಾದ ಸಂಗತಿಗಳನ್ನು ಪ್ರತಿಪಾದಿಸಿದನು. ಆದರೆ ನೀತ್ಸೆಯು ಮನುವಿಗೆ ಉನ್ನತಸ್ಥಾನ ಕೊಟ್ಟದ್ದು ಕಂಡುಬರುತ್ತದೆ.

ಸಾರ್ಡಿನದ ರಾಜನ ಪ್ರತಿನಿಧಿಯಾಗಿ ಕೆಲಸಮಾಡುತ್ತ ಮಾಸ್ಕೋದಲ್ಲಿ ನೆಲೆಸಿದ್ದಾಗ ಶ್ರೀಮಂತ 'ಮಸಿಟ್ರೆ'(Count de Masitre)ಯು ಮನುವಿನ ಕೃತಿಯನ್ನು ಕುರಿತು ಭಾಷಣಗಳನ್ನು ಮಾಡಿದ್ದನು. ಸಂತ ಸಿಮೋನನು ಸಾಕಷ್ಟು ಮಟ್ಟಿಗೆ ಮನುವಿನ ಸಾಮಾಜಿಕ ಚಿಂತನೆಯನ್ನು ತನ್ನ ಭಾಷಣಗಳಲ್ಲಿ ಪರಿಚಯಿಸಿದ್ದನು. ಆತನ ವಿದ್ಯಾರ್ಥಿಯಾದ 'ಆಗಸ್ಟ್ ಕಾಮ್ಟೆ' – ಎಂಬಾತನೂ ಅದೇ ದಾರಿಯನ್ನು ಹಿಡಿದಿದ್ದನು. ಈತನನ್ನು ತುಂಬಾ ಉತ್ಸಾಹದಿಂದ ಪಾಶ್ಚಾತ್ಯ ವಿದ್ವಾಂಸರು ಸಮಾಜಶಾಸ್ತ್ರದ ಜನಕನೆಂದು ಕೊಂಡಾಡುತ್ತಾರೆ. ಮಾನ್ಸ್, ಲೂಯಿ ಜಕೋಲ್ಲಿಟ್‌ರು ಕೆಲವಾರು ವರ್ಷಗಳು ಭಾರತದಲ್ಲಿ ಇದ್ದವರಾದ್ದರಿಂದ, ಭಾರತೀಯರ ದೃಷ್ಟಿಕೋನವನ್ನು ತಕ್ಕಮಟ್ಟಿಗೆ ತಿಳಿದವರಾಗಿದ್ದವರು, ತಮ್ಮ ಕೃತಿಗಳಲ್ಲಿ ವಿಚಾರ ಮಾಡುತ್ತ, 'ನೆಪೋಲಿಯನ್ನಿನ ನಿಯಮ'ಗಳು ಎಂಬ ಗ್ರಂಥವು ಮನುಧರ್ಮ ಶಾಸ್ತ್ರಕ್ಕೆ ಆಭಾರಿಯಾಗಿದೆ ಎಂದು ಭಾವಿಸಿದ್ದಾರೆ. ಅಲ್ಲದೆ, ಎರಡು ಗ್ರಂಥಗಳನ್ನು ಪಕ್ಕ ಪಕ್ಕದಲ್ಲಿಟ್ಟು ವಿಚಾರ ಮಾಡುತ್ತ, ಅವುಗಳ ದೃಷ್ಟಿಕೋನ ಮತ್ತು ವಸ್ತುಗಳಲ್ಲಿರುವ ಸಾಮ್ಯವನ್ನು ತೋರಿದ್ದಾರೆ.

ನಾವೀಗ ಯೂರೋಪದಿಂದ ಅಮೆರಿಕದ ಕಡೆಗೆ ತಿರುಗೋಣ. ಮನುಧರ್ಮ ಶಾಸ್ತ್ರದ ಒಂದು ಪ್ರತಿಯು ಅಟ್ಲಾಂಟಿಕ್ ಸಾಗರವನ್ನೂ ದಾಟಿ, ಇಂಗ್ಲೆಂಡ್‌ನ ಮೇಲ್ಮನೆಯ (ಲಾರ್ಡ್) ಸಭೆಯ ಸದಸ್ಯನಾದ, 'ಥೋರೋ'ವನ್ನು ಅವನ ಸ್ನೇಹಿತರ ಮೂಲಕ ತಲುಪಿತು. ಥೋರೋ ಅದನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಿದನು.[೧೪] ಅನಂತರ ಆ ಕೃತಿಯನ್ನು ರಾ. ವಾ. ಎಮರ್ಸನ್‌ನಿಗೆ (Ralph Waldow Emerson) ಕಳುಹಿಸಿದನು. ಆತನು ಕೃತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿ, ತಾನು ನಡೆಸುತ್ತಿದ್ದ ವಾರ ಪತ್ರಿಕೆ 'The Dial' (ಸೂಚಿ ಫಲಕ) ಎಂಬಲ್ಲಿ ಅದರ ಪ್ರತಿಯೊಂದು ಅಧ್ಯಾಯವನ್ನು ಪ್ರಕಟಿಸಿದನು. ಅನಂತರ ಪುಸ್ತಕವು ವಾಲ್ಟ್ ವ್ಹಿಟಮನ್‌ನ (Walt Whitman) ಕೈಸೇರಿತು. ಈತನು ಥೋರೋ ಮತ್ತು ಎಮರ್ಸನ್ ಇಬ್ಬರಿಗೂ ಗೆಳೆಯನಾದವನು. ಜೊಸೈಯ ರಾಯ್ಸ್ (Josiah Royce) ಎಂಬ ಹಾರ್ವರ್ಡ್ ವಿದ್ಯಾಲಯದ ಪ್ರಾಧ್ಯಾಪಕನೂ, ಸಂತ ಲೂಯಿ ಆಶ್ರಮದ ಹ್ಯಾರಿಸ್‌ನೂ, ತುಂಬ ಶ್ರದ್ಧೆಯಿಂದ ಹಿಂದೂ ಧರ್ಮದ ವಿಚಾರಗಳನ್ನು ಅಭ್ಯಾಸ ಮಾಡಿದವರು. ಇವರಿಗೆ ಮನುಧರ್ಮ ಶಾಸ್ತ್ರದ ಪ್ರವೇಶ ಚೆನ್ನಾಗಿಯೇ ಇದ್ದಿತು. ಹಲವಾರು ಜನ ಯುವ ಸಮಾಜಶಾಸ್ತ್ರಜ್ಞರು ಯೂರೋಪಿನ ವಿಶ್ವವಿದ್ಯಾಲಯಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಸ್ವದೇಶಕ್ಕೆ ಹಿಂದಿರುಗಿದ ಮೇಲೆ ಅಲ್ಲಿ ನಾಯಕರಾಗಿ ಪರಿಣಮಿಸಿದರು. ಆ ವೇಳೆಗಾಗಲೇ ಅವರು ಮನುಧರ್ಮಶಾಸ್ತ್ರದ ಬಗೆಗೆ ಸಾಕಷ್ಟು ಪರದೇಶಗಳಲ್ಲಿ ತಿಳಿದಿದ್ದರೆಂದು ಹೇಳಬೇಕಾಗಿಲ್ಲ.

ಎಣಿಕೆಗೆ ಮೀರಿದಷ್ಟು ಪ್ರಾಚೀನವಾದರೂ ಮನುವಿನ ವಿಚಾರಗಳು ತಮ್ಮ ಮೂಲಸ್ವರೂಪವನ್ನು ಕಳೆದುಕೊಂಡಿಲ್ಲ, ಇಂದಿಗೂ ಗಹನ ವಿಚಾರಗಳಿಂದ ಕೂಡಿ ಸುಸಂಗತವಾಗಿಯೇ ಇವೆ. ಮನುಷ್ಯರು ಕಲ್ಪನೆ ಮಾಡಿಕೊಳ್ಳಬಹುದಾದ ಅತ್ಯಂತ ಶ್ರೇಷ್ಠವಾದ, ಸಮಾಜದ ಸರ್ವತೋಮುಖವೂ ಸಂಪೂರ್ಣವೂ ಆದ ಸಮಾಜ ಜೀವನ ನಾಟಕದ ಅಡಕದಂತೆ ಈ ಗ್ರಂಥವಿದೆ. ಅದು ಮುಖದ ಮೇಲೆ ನಿರಂತರತೆಯ, ಅಮರ್ತ್ಯದ ಕಳೆಯನ್ನು ಹೊತ್ತಿದೆ. ಸಮಾಜ ಜೀವನದ ಎಲ್ಲ ಮುಖಗಳನ್ನೂ ಸಂಪೂರ್ಣವಾಗಿ ಕುರಿತು ಹೇಳುತ್ತ ಮನುಧರ್ಮಶಾಸ್ತ್ರವು ಇಂದಿಗೂ ಮಾನವರು ಆಲೋಚಿಸಿ ರೂಪಿಸಬಹುದಾದ ಅತ್ಯುತ್ತಮ ಆಲೋಚನೆಗಳಿಂದ ಕೂಡಿದೆ. ಗ್ರಂಥವು ಶಾಶ್ವತವೂ ಅಮರ್ತ್ಯವೂ ಆದ ಬೆಳಕನ್ನು ಹೊಂದಿದೆ. ಸಮಕಾಲೀನ ಜಗತ್ತಿನ ವಿದ್ಯಾವಂತರೂ ಚಿಂತನಶೀಲರೂ ಗ್ರಂಥಕ್ಕೆ ಅತ್ಯುತ್ತಮವಾದ ಬೆಲೆಯನ್ನು ಕೊಡದಿರುವುದು ಸಾಧ್ಯವಿಲ್ಲ. ನಾನು ಈ ಸಂದರ್ಭದಲ್ಲಿ ದೇಶವಿದೇಶಗಳ ಸಜ್ಜನರು, ಹಿಂದಿನ ಇಂದಿನ ಸಾಮಾಜಿಕ ತತ್ತ್ವ ನಿರೂಪಕರಿಗೆ ಹೋಲಿಸಿ ಮನುವಿಗೆ ಕೊಟ್ಟ ಅತ್ಯಂತ ಉನ್ನತ ಪದವಿಯನ್ನು ಕುರಿತು ಹೇಳಲೇಬೇಕು. ಇವರಲ್ಲಿ ರಷ್ಯಾದ ಬ್ಲಾವಟ್ಸ್ಕಿ (H.P. Blavatsky), ಇಂಗ್ಲೆಂಡಿನ ಡಾ. ಆನಿಬೆಸೆಂಟ್ (ಅನಂತರ

ಆಕೆ ಭಾರತೀಯಳೂ ಆಗಿಬಿಟ್ಟಳು), ಸ್ವಾಮಿ ದಯಾನಂದ ಸರಸ್ವತಿ, ಶ್ರೀ ಅರಬಿಂದರು, ರಮಣ ಮಹರ್ಷಿಗಳು, ಸ್ವಾಮಿ ವಿವೇಕಾನಂದ, ರಬೀಂದ್ರನಾಥ ಟಾಗೋರರು, ನಾಲ್ಕು ಮಠಗಳ ಶಂಕರಾಚಾರ್ಯರುಗಳು, ಡಾ. ಭಗವಾನದಾಸರು, ಗಾಂಧೀಜಿಯವರು, ಆಚಾರ್ಯ ವಿನೋಬಾ ಭಾವೆಯವರು, ಡಾ. ಎಸ್. ರಾಧಾಕೃಷ್ಣನ್ ಅವರು (ಇವರೆಲ್ಲ ಭಾರತೀಯರು), ಬೆಲ್ಜಿಯಂನವರಾದ ಮಾರಿಸ್ ಮ್ಯಾಟರ್‌ಲಿಂಕ್ (Maurice Maeterlink), ರಷ್ಯದ ಪಿ.ಡಿ. ಔಸ್ಪೆನ್‌ಸ್ಕಿ (P.D. Ouspensky) ಮತ್ತು ಪಿತಿರಿವ್ ಎ ಸೊರೊಕಿನ್ (Pitirim A. Sarokin) ಎಂಬ ಅಮೆರಿಕದವರು ಇದರಲ್ಲಿ ಸೇರಿದ ಕೆಲವರು. ಇವರೆಲ್ಲರೂ ಅಧ್ಯಾಪಕರು, ತತ್ತ್ವಜ್ಞಾನಿಗಳು ಮತ್ತು ಸಮಾಜ ವಿಜ್ಞಾನಿಗಳು, ಮನುಧರ್ಮಶಾಸ್ತ್ರವನ್ನು ಆಳವಾಗಿ ಅಭ್ಯಸಿಸಿ ಮನುವನ್ನು ಪ್ರಶಂಸೆ ಮಾಡಿರುವರು. ಮುಂದೆ ನಾವು ಮನುಷ್ಯ ಮತ್ತು ಸಮಾಜ ಇವರ ಸಂಬಂಧ ಬೆಳವಣಿಗೆ ಮುಂತಾದುವನ್ನು ಕುರಿತು ವಿಚಾರ ಮಾಡುವಾಗಲೂ ಮನುವೇ ನಮಗೆ ಮಾರ್ಗದರ್ಶಕನೆಂದು ಹೇಳಿದರೆ ಅಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ.

ಪರಿಸಮಾಪ್ತಿ

ಮನುವು ನಿರೂಪಿಸಿರುವ ತತ್ತ್ವಗಳು ಕಾಲ್ಪನಿಕವೂ ಬೌದ್ಧಿಕವಾದ ಊಹೆಗಳೂ ಆಗಿದ್ದುವೇ ಅಥವಾ ಅವಕ್ಕೆ ಜೀವನಾಧಾರವಿದ್ದಿತೇ? ಎಂದು ಕೆಲವರು ಪ್ರಶ್ನೆ ಎತ್ತಿರುವುದುಂಟು. ಮನುವಿನ ಕೃತಿಯಲ್ಲಿ ಚಿತ್ರಿತವಾಗಿರುವ ಮಾನವ ಸಮಾಜವು ಹಿಂದೆಂದಾದರೂ ಇದ್ದಿತೇ ಅಥವಾ ಮುಂದೆ ಇಂತಹ ಸಮಾಜ ಸೃಷ್ಟಿಯಾಗಬಹುದೆಂದು ಆತನ ಊಹೆಯೋ? ಇಂದಿನ ಸಮಾಜ ಶಾಸ್ತ್ರಜ್ಞರು, ಮಾನವ ಸಮಾಜದ ಇರವನ್ನು ಕುರಿತು ತತ್ತ್ವಗಳನ್ನು ರೂಪಿಸಬಹುದೇ ಹೊರತು, ಶೂನ್ಯದಿಂದ ಯಾವುದೂ ಉದಯಿಸುವುದಿಲ್ಲ ಎನ್ನುವರು. ಸಾಮಾಜಿಕ ಚಿಂತನೆಗಳಿಗೆ ಅರ್ಥ ಬರುವುದು, ಅಂತಹ ಸಮಸ್ಯೆ ಸಮಾಜಜೀವನದಲ್ಲಿ ಉಂಟಾದಾಗ ಮಾತ್ರ. ಸಮಾಜ ಮತ್ತು ತಿಳುವಳಿಕೆಯಲ್ಲಿ ನಿಕಟ ಸಂಬಂಧವಿರುತ್ತದೆ. ಪಾಶ್ಚಿಮಾತ್ಯ ದೇಶಗಳ ಕೆಲವು ಚಿಂತಕರು, ಯಾವ ಕೊರತೆಯನ್ನೂ ಕಾಣದ ಸಾಮಾಜಿಕ ರಾಜಕೀಯ ತತ್ತ್ವಗಳನ್ನುಳ್ಳ ಕಾಲ್ಪನಿಕ ದ್ವೀಪಗಳನ್ನು ನಿರ್ಮಿಸಿಕೊಂಡಿರುತ್ತಾರಲ್ಲ, ಅಲ್ಲಿ ನೀವು ಮೇಲ್ಕಂಡ ತತ್ತ್ವದ ಅರ್ಥವನ್ನು ಮನಗಾಣಬಹುದು. ಪ್ರತಿಯೊಬ್ಬ ಚಿಂತಕನೂ ತನ್ನ ಕಾಲದ ಸಾಮಾಜಿಕ ಕುಂದುಕೊರತೆಗಳಿಗೆ, ತನ್ನ ಕಾಲ್ಪನಿಕ ದ್ವೀಪದ ಸಮಾಜ, ರಾಜಕೀಯ ಜೀವನದ ತತ್ತ್ವಗಳಲ್ಲಿ ಮದ್ದನ್ನು ಸೂಚಿಸಿರುತ್ತಾನೆ. ಅದೇ ರೀತಿಯಲ್ಲಿ ಮನುವಿನ ತತ್ತ್ವಗಳಲ್ಲಿಯೂ ಅವನ ಕಾಲದಲ್ಲಿ ಬಾಳಿದ ಮಾನವರ ಇತಿಹಾಸ, ಸಾಮಾಜಿಕ, ರಾಜಕೀಯ ಜೀವನಗಳು ಚಿತ್ರಿತವಾಗಿವೆ. ಹಿಂದೂಗಳು ಅದನ್ನು

ಸತ್ಯಯುಗವೆಂದು ಕರೆದಿದ್ದಾರೆ. ಅದು ಚಿನ್ನದಂತಹ ಕಾಲ. ಅಂದಿನ ಮಾನವರ ಮನಸ್ಸಿನಲ್ಲಿ ಧರ್ಮವು ನೆಲೆಸಿದ್ದಿತು. ಸಮಾಜದಲ್ಲಿ ಸಂಪೂರ್ಣ ಹೊಂದಾಣಿಕೆ ಇದ್ದಿತು. ಧರ್ಮದ ಕಾಮಧೇನುವು ನಾಲ್ಕು ಕಾಲುಗಳನ್ನು ಊರಿ ಸ್ಥಿರವಾಗಿ ನಿಂತಿದ್ದಿತು.

ಅಡಿಟಿಪ್ಪಣಿಗಳು

೧. ಮತ್ಸ್ಯ ಪುರಾಣ.

೨. *Institutes of Manu*, Vol-XV, ಸಂ. ಸರ್. ಜಿ.ಸಿ. ಹೌಟನ್, ಲಂಡನ್ ೧೮೨೫. ಈ ಗ್ರಂಥದ ಮುನ್ನುಡಿಯಲ್ಲಿ ಸರ್. ವಿಲಿಯಂ ಜೋನ್ಸ್ ಇವರಿಂದ ಉದ್ಧೃತ.

೩. ಜಿ. ಬ್ಯೂಹ್ಲರ್ ಅವರಿಂದ *Laws of Manu* ಗ್ರಂಥದಲ್ಲಿ ಉದ್ಧೃತ, ಪು.೧೩–೧೪.

೪. ನೋಡಿ: ಇದೇ ಲೇಖಕರ *Manu Dharma Shastra*, ಪು. ೨೪–೨೫.

೫. ಸರ್. ಮೋನಿಯರ್ ವಿಲಿಯಂಸ್'ರ *Indian Wisdom*

೬. 'ಸಮಾಜದ ಜೈವಿಕ ಸಾದೃಶ್ಯವನ್ನು ಕುರಿತ ಸಿದ್ಧಾಂತದ ಕರ್ತೃತ್ವ' ಎಂಬ ಗ್ರಂಥವನ್ನು ತಪ್ಪಾಗಿ ಹರ್ಬರ್ಟ್ ಸ್ಪೆನ್ಸರ್‌ನ ಹೆಸರಿಗೆ ಸೇರಿಸಿಬಿಟ್ಟಿದೆ. ಆದರದು ಮನುವಿಗೆ ನ್ಯಾಯೋಚಿತವಾಗಿ ಸೇರಬೇಕಾದ್ದು. ಹರ್ಬರ್ಟ್ ಸ್ಪೆನ್ಸರ್‌ಗೆ ಇದರ ಮೂಲ ತಿಳಿದಿತ್ತು.

೭. ೧೧ನೆಯ ಅಧ್ಯಾಯ ನೋಡಿ, ೫೫–೭೧ ಮನುವಿನ ನಿಯಮಗಳು.

೮. ಟಾಯನ್‌ಬಿಯವರ *Study of History* ಗ್ರಂಥದಲ್ಲಿ ಡಚ್ಚರ ನಿಯಮಗಳು ಜನರ ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರಿದುವು ಎಂದಿದೆ. ಅದರೆ ಅದು ಸರಿಯಲ್ಲ.

೯. ಇದೇ ಲೇಖಕರು ತಮ್ಮ 'ಮನುಧರ್ಮ ಶಾಸ್ತ್ರ'ವೆಂಬ ಗ್ರಂಥದಲ್ಲಿ ಸಾಮಾಜಿಕ ಮತ್ತು ಐತಿಹಾಸಿಕವಾಗಿ ಇವನ್ನು ವಿವರವಾಗಿ ಚರ್ಚಿಸಿದ್ದಾರೆ.

೧೦. 'ಭಾರತಕ್ಕೆ ಗ್ರೀಕರ ಋಣ'ವೆಂಬ ವಿಸ್ತಾರವಾದ ಗ್ರಂಥವನ್ನು ಇದೇ ಲೇಖಕರು ರಚಿಸುತ್ತಿದ್ದಾರೆ.

೧೧. ಇದೇ ಲೇಖಕರು ಸಿದ್ಧಪಡಿಸುತ್ತಿರುವ ಕೃತಿ *History of Social Thought* ಎಂಬ ಗ್ರಂಥವು, ಕ್ರಿಸ್ತಪೂರ್ವದಿಂದ ಇಂದಿನವರೆಗೆ ಪಾಶ್ಚಾತ್ಯರ ಮೇಲೆ 'ಮನುಧರ್ಮ ಶಾಸ್ತ್ರ'ದ ಪ್ರಭಾವವನ್ನು ಗುರುತಿಸಿದೆ.

೧೨. ಇದೇ ಲೇಖಕರು ಬರಲಿರುವ *Sociology of Knowledge* ಎಂಬ ಗ್ರಂಥದಲ್ಲಿ ಈ ವಿಷಯವನ್ನು ಚರ್ಚಿಸಿದ್ದಾರೆ.

೧೩. ಡಾ. ಎಸ್. ರಾಧಾಕೃಷ್ಣನ್ ಅವರು *Eastern Religion and Western Thought* ಎಂಬ ಗ್ರಂಥದಲ್ಲಿ 'ಐಟೆಲ್' ಎಂಬ ವಿದ್ವಾಂಸನ ಅಭಿಪ್ರಾಯದಂತೆ, ಕಾಮ್ಟೆಯು ಬೌದ್ಧ ಧರ್ಮದ ಪ್ರಭಾವಕ್ಕೆ ಒಳಪಟ್ಟಿದ್ದನೆನ್ನುತ್ತಾರೆ. ಕಾಮ್ಟೆಯು ಮನುವನ್ನು ಕುರಿತು ಹೇಳಿರುವುದರಿಂದ ಅವನ ಪ್ರಭಾವಕ್ಕೆ ಒಳಪಟ್ಟಿದ್ದುದು ನಿಶ್ಚಿತ.

೧೪. ಗಾಂಧೀಜಿಯವರು ಥೋರೋವಿನಿಂದ ಸ್ಫೂರ್ತಿಗೊಂಡರು ಎನ್ನುವುದಕ್ಕಿಂತ ಆ ಪಾಶ್ಚಾತ್ಯ ವಿದ್ವಾಂಸರ ಮೂಲ ಸೆಲೆಯಾದ ಭಾರತದ ಋಷಿಗಳ ವಿಚಾರಧಾರೆಯಿಂದ ಪ್ರೇರಿತರಾಗಿದ್ದರೆನ್ನಬೇಕು. ಪೂರ್ವದ ವಿವೇಕವು ಅಮೆರಿಕನ್ ಬುದ್ಧಿಮತ್ತೆಯ ಮೂಲಕ ಶೋಧಿತವಾಗಿ ಬಂದಿದೆ.

* * * *